
ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ



ಅಡ್ಡಂಡ ಕಾರ್ಯಪ್ಪ ಅವರು ಬರೆದಿರುವ 'ಟಿಪ್ಪು ನಿಜಕನಸುಗಳು' ಪುಸ್ತಕವು ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ ಮರು ಲೋಕಾರ್ಪಣೆಗೊಂಡಿದ್ದು ಚಿಂತಕರಾದ ಜೆ.ಬಿ. ಹರೀಶ್, ಎಸ್.ಎನ್. ಸೇತುರಾಮ್, ಚಕ್ರವರ್ತಿ ಸೂಲಿಬೆಲೆ, ಎಸ್.ಆರ್. ಲೀಲಾ ಹಾಗೂ ಲೇಖಕರಾದ ಅಡ್ಡಂಡ ಕಾರ್ಯಪ್ಪ ಉಪಸ್ಥಿತರಿದ್ದು ಮಾತನಾಡಿದರು.

ಸಂಪುಟ : 44 | ಸಂಚಿಕೆ : 17 | ಮಾರ್ಗಶಿರ – ಪುಷ್ಯ | ಕಲಿಯುಗಾಬ್ದ 5124 | 15-12-2022 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4

# ಸನಾತನ ಧರ್ಮಿಯರಿಗಿಲ್ಲವೇ ಸಮಕಾಲೀನ ಮಾನವ ಹಕ್ಕುಗಳು !!??

ಎರಡು ಮಹಾಯುದ್ಧಗಳ ಭೀಕರತೆಯ ಪರಿಣಾಮವಾಗಿ ವಿಶ್ವ ಸಂಸ್ಥೆಯ ಮಾನವ ಹಕ್ಕುಗಳ ಘೋಷಣೆ (UDHR) ಅಸ್ತಿತ್ವಕ್ಕೆ ಬಂತಾದರು, ಅದರ ಸಾರ್ವತ್ರಿಕ ಅನುಷ್ಠಾನ ಪ್ರಶ್ನೆಯಾಗಿ ಉಳಿದಿದೆ. ಪ್ರಮುಖವಾಗಿ, ಅವಿಭಜಿತ ಭಾರತ ಮತ್ತು ಅಫ್ಘಾನಿಸ್ತಾನ ಪ್ರದೇಶದಲ್ಲಿ ಪಸರಿಸಿದ ಹಿಂದು ಧರ್ಮ, ವಿದೇಶಿ ಆಕ್ರಮಣ ಮತ್ತು ಸಾಮ್ರಾಜ್ಯಶಾಹಿ ಹಿತಾಸಕ್ತಿಗೆ ಬಲಿಪಶುವಾಗಿದ್ದರೂ, ಇಂದು ಭಾರತ ವಿದೇಶಾಂಗ ಮಂತ್ರಾಲಯದ ಪ್ರಕಾರ, ಸುಮಾರು 210 ದೇಶಗಳಲ್ಲಿ ಭಾರತೀಯ ಮೂಲದವರನ್ನು (NRIs & PIOs) ಕಾಣಬಹುದಾಗಿದೆ. ಇಂದು ಭಾರತ, ನೇಪಾಳ ಮತ್ತು ಮಾರಿಷಸ್ ದೇಶಗಳಲ್ಲಿ ಹಿಂದು ಬಹುಸಂಖ್ಯಾತರಿದ್ದು, ಹಿಂದು ಸಂಸ್ಕೃತಿ ಕಾಂಬೋಡಿಯ, ಥೈಲೆಂಡ್, ಫಿಲಿಪೈನ್ಸ್, ವಿಯಟ್ನಾಮ್ (ಚಮ್ ಸಮುದಾಯ) ಮತ್ತು ಇಂಡೊನೇಶಿಯ(ಬಾಲಿ ಹಿಂದುಗಳು)ದಲ್ಲಿ ಕಾಣಬಹುದಾಗಿದೆ. ಇದರ ಹೊರತಾಗಿಯು ಹಿಂದೂಗಳ ಅಸ್ಮಿತೆಗೆ ನಿರಂತರ ಅಭದ್ರತೆ ಕಾಡುತ್ತಿರುವುದು UDHR ಔಚಿತ್ಯವನ್ನೇ ಪ್ರಶ್ನಿಸುವಂತೆ ಮಾಡಿದೆ.

ಆರು ಅಲ್ಪಸಂಖ್ಯಾತ ಸಮುದಾಯಗಳಿಗೆ ಸಂವಿಧಾನಿಕ ಮಾನ್ಯತೆ ಮತ್ತು ಬಹು ಸಂಖ್ಯಾತರಂತೆ ಸಮಾನ ಗೌರವ, ಸ್ಥಾನಮಾನ, ಅವಕಾಶಗಳು ಮತ್ತು ಸವಲತ್ತುಗಳನ್ನು ನೀಡುವ ದೇಶದ ಮೂಲ ನಿವಾಸಿ ಹಿಂದೂಗಳಿಗೆ, ಇದುವೆ ಜನ್ಮ ಭೂಮಿ, ಇದುವೆ ಪುಣ್ಯಭೂಮಿ. ಆದರೆ, ಹಿಂದೂಗಳ ಮನ ನೋಯಿಸುವ, ಅವರ ಸಹಿಷ್ಣುತೆಯನ್ನೇ ಅವರ ದುರ್ಬಲತೆಯಂತೆ ಕಾಣುವ, ಅವರ ಮಾನವ ಹಕ್ಕುಗಳ ಮೇಲೆ ನಿರಂತರ ಹಲ್ಲೆ ನಡೆಸುವ ಪ್ರಕರಣಗಳು ದೇಶದೊಳಗೆ ಮತ್ತು ಹೊರಗೆ ವ್ಯಾಪಿಸಿದೆ ಎಂದರೆ ತಪ್ಪಾಗಲಾರದು.

ತಮಿಳುನಾಡು ಮತ್ತು ಆಂಧ್ರ ಪ್ರದೇಶದಲ್ಲಿ ನಡೆಯುವ ನಿರಂತರ ಬಲವಂತದ ಮತಾಂತರ ಪ್ರಕರಣಗಳು, ದೇವರ ನಾಡು ಕೇರಳದಲ್ಲಿ ಹಿಂದೂಗಳ ಮೇಲೆ ದೌರ್ಜನ್ಯ, ಕೇರಳದ ಮೂಲಕ ಕರ್ನಾಟಕ ಕರಾವಳಿಯಲ್ಲಿ ಹಿಂದೂ ಕಾರ್ಯಕರ್ತರ ಕಗ್ಗೊಲೆಗಳು, ಶಕ್ತಿ ದೇವತೆಗಳನ್ನು ಅಪಾರವಾಗಿ ಆರಾಧಿಸುವ ನಾಡು ಪಶ್ಚಿಮ ಬಂಗಾಳದಲ್ಲಿ ಹಿಂದೂಗಳ ಮಾರಣ ಹೋಮ. ಒಟ್ಟಾರೆಯಾಗಿ, 9 ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಲ್ಲಿ ಹಿಂದೂಗಳು ಅಲ್ಪಸಂಖ್ಯಾತರಾಗಿ ಅನುಭವಿಸುತ್ತಿರುವ ಮಾನವ ಹಕ್ಕುಗಳ ಉಲ್ಲಂಘನೆಗೆ ಪರಿಹಾರ ನೀಡುವವರಾರು?

1971 ಯುದ್ಧ ಸಂದರ್ಭದಲ್ಲಿ ಬಂಗಾಲಿ ಮತ್ತು ಹಿಂದೂಗಳ ಜನಾಂಗೀಯ ಕಗ್ಗೊಲೆಗಳು, ಸುಮಾರು 3 ಮಿಲಿಯನ್ ಸಾವುಗಳು ಮತ್ತು 2 ಲಕ್ಷಕೂ ಹೆಚ್ಚು ಅತ್ಯಾಚಾರಕ್ಕೆ ಇಂದಿಗೂ ನ್ಯಾಯ ದೊರೆತಿಲ್ಲ. ಪ್ರತಿ ವರ್ಷವೂ ಒಂದು ಸಾವಿರಕ್ಕೂ ಹೆಚ್ಚು ಮುಸ್ಲಿಮೇತರ ಮಹಿಳೆಯರನ್ನು ಅಪಹರಿಸಿ, ಅತ್ಯಾಚಾರವೆಸಗಿ, ಬಲವಂತದ ಮತಾಂತರ ನಡೆಸುವ ಪಾಕಿಸ್ತಾನವನ್ನು ಪ್ರಶ್ನಿಸದವರು, ಭಾರತ ಪೌರತ್ವ ತಿದ್ದುಪಡಿ ಕಾಯ್ದೆ 2019, ಅಂತರಾಷ್ಟ್ರೀಯ ಮಟ್ಟದಲ್ಲಿ ಖಂಡಿಸುತ್ತಾರೆ, ತಮ್ಮ ಶಾಸನ ಸಭೆಗಳಲ್ಲಿ ಚರ್ಚಿಸುತ್ತಾರೆ.

ಹಿಂದೂಗಳನ್ನು ದ್ವಿತೀಯ ದರ್ಜೆ ಪ್ರಜೆಗಳಂತೆ ತಮ್ಮ ದೇಶದಲ್ಲಿ ಕಾಣುವವರು, ತಮ್ಮ ಧಾರ್ಮಿಕ ನಂಬಿಕೆಗಳನ್ನು ಹೇರುವ (ಹಲಾಲ್, ಹಿಜಾಬ್, ಲವ್ ಜಿಹಾದ್) ಜ್ವಲಂತ ಉದಾಹರಣೆಗಳಾಗಿ ನಮ್ಮ ಮುಂದಿದೆ. ಬಾಂಗ್ಲದೇಶ ಮತ್ತು ಪಾಕಿಸ್ತಾನದಲ್ಲಿ ಹಿಂದೂ ದೇವಾಲಯಗಳನ್ನು ಧ್ವಂಸ ಮಾಡುವವರ ಹಾಜಿ ಅಲಿ ದರ್ಗಾ, ಅಜ್ಮೆರ್ ಶರೀಫ್ ದರ್ಗಾ ಭಾರತೀಯ ನೆಲದಲ್ಲಿ ಎಲ್ಲ ಧರ್ಮೀಯರು ಗೌರವಿಸುತ್ತಿದ್ದೇವೆ. ಇದು ಭಾರತದ ಔದಾರ್ಯತಗೆ ಸಾಕ್ಷಿ. ಖಲಿಸ್ತಾನ ಪ್ರತ್ಯೇಕತಾವಾದಿಗಳಿಗೆ ಸಹಾಯ ಮಾಡುವವರು ಬಲೋಚಿಸ್ತಾನದ ಮಾರಣ ಹೋಮಗಳನ್ನು ಮರೆಯುವರು.

ಭಾರತದಲ್ಲಿ ನಡೆಯುವ ಒಂದು ನೂಪುರ ಶರ್ಮ ಪ್ರಕರಣಕ್ಕೆ ವೈಷಮ್ಯದ ಕಗ್ಗೊಲೆಗಳು ನಡೆದಾಗ ಅಭಿವ್ಯಕ್ತಿ ಸ್ವಾತಂತ್ರ ಅನ್ವಯಿಸುವುದಿಲ್ಲ. ಆಗಸ್ಟ್ 2020ರಲ್ಲಿ 42 ಧರ್ಮನಿಂದನೆ ಪ್ರಕರಣಗಳಿಗೆ ಮರಣದಂಡನೆಯಂತಹ ಶಿಕ್ಷೆವಿಧಿಸಿದ್ದು ಇದೇ ಪಾಕಿಸ್ತಾನದಲ್ಲಿ. 2019ಲ್ಲಿ ಔಷಧಿಗಳನ್ನು ಕೊರಾನ್ ಮುದ್ರಿತ




ಪತ್ರಿಕೆಯಲ್ಲಿ ನೀಡಿದ್ದ ಪಶು ವೈದ್ಯನಿಗೆ ಧರ್ಮ ನಿಂದನೆಗಾಗಿ ಕಠಿಣ ಶಿಕ್ಷೆ; ಬಾಂಗ್ಲದೇಶದ ಅಹಾಕಿಲ್ ದೇವನಾಥ ಎಂಬ ಶಿಕ್ಷಕನ ಮೇಲೆ ಧರ್ಮನಿಂದನೆಗಾಗಿ ಶಿಕ್ಷೆ ಆದರೆ, ಕಾಶ್ಮೀರ ಕಣಿವೆಯಲ್ಲಿ ಪ್ರಾಣತೆತ್ತ ಮತ್ತು ಊರು ತೊರೆದ 350000 ಪಂಡಿತರಿಗೆ ಜೀವನವೆಲ್ಲ ಶಿಕ್ಷೆ. ಧರ್ಮಾಧಾರಿತ ನಿರಾಶ್ರಿತರಿಗೆ (ಯಹೂದಿಗಳು, ಪಾರ್ಸಿಗಳು, ದಲಾಯಿ ಲಾಮಾ ಮತ್ತು ಟಿಬೇಟಿಯನ್ನರು, ರೊಹಿಂಗ್ಯರು, ಅಫ್ಘನ್ ಮುಸ್ಲಿಂರು, ಅಹಮದೀಯ ಮುಸ್ಲಿಮರು, ಶ್ರೀಲಂಕಾದ ತಮಿಳರು) ಆಶ್ರಯ ನೀಡುವ ಭಾರತದ ಹಿಂದೂಗಳ ಮೇಲೆ ಶೋಷಣೆಗೆ ಮಿತಿ ಎಲ್ಲಿ? ಏಷಿಯಾ ಕಪ್ ಗೆದ್ದಾಗ ಮುಸ್ಲಿಮರಿಂದ ಹಿಂದೂಗಳ ಮೇಲೆ ಇಂಗ್ಲೆಂಡ್‌ನಲ್ಲಿ ದಾಳಿ, ಧರ್ಮ ಯುದ್ಧದ ಹೆಸರಲ್ಲಿ ಭಯೋತ್ಪಾದಕ ದಾಳಿಗಳು–ಪುಲ್ವಾಮಾದ ಹುತಾತ್ಮ ಯೋಧರಿಗಿರಲಿಲ್ಲವೆ ಮಾನವ ಹಕ್ಕುಗಳು?

ಹಿಂದೂಗಳು ಉಳಿದ ಧರ್ಮಗಳಂತೆ ಧರ್ಮಯುದ್ಧಗಳಲ್ಲಿ (crusades) ತೊಡಗಿರಲ್ಲಿಲ್ಲ. ಭಾರತ ಸ್ವಾತಂತ್ರ ಚಳುವಳಿಯು ಉಳಿದ ದೇಶಗಳಂತೆ ಅತೀವ ರಕ್ತ–ಪಾತದಿಂದ ಕೂಡಿರಲಿಲ್ಲ. ಭಾರತ ಎಲ್ಲಾ ವಲಯಗಳಲ್ಲೂ ಅನುಸರಿಸಿದ್ದು ಬಹುತೇಕ ರಕ್ಷಣಾತ್ಮಕ ತಂತ್ರಗಾರಿಕೆಗಳೆ ಹೊರತು ಆಕ್ರಮಣಕಾರಿ ತಂತ್ರಗಾರಿಕೆಗಳಲ್ಲ. ಆದರೆ, ಕೆಲವೊಮ್ಮೆ ನ್ಯಾಯಯುತ ಬೇಡಿಕೆಗಳ ಮುಂದಿಟ್ಟರೂ ಮೂಲಭೂತವಾದಿಗಳು ಎಂದು ಕರೆಸಿಕೊಂಡಿದ್ದು ಇದೆ. ಅಂತರಾಷ್ಟ್ರೀಯ ಮಟ್ಟದಲ್ಲಿ ಡಿಸ್ಮೇಂಟ್ಲಿಗ್ ಹಿಂದೂಯಿಸಂಗೆ ದೊರೆತ ಬೆಂಬಲ ಹಿಂದೂ ಹಕ್ಕುಗಳ ಉಲ್ಲಂಘನೆಯಾದಾಗ ಸಿಗಲ್ಲಿಲ್ಲ. ಅಂತರಾಷ್ಟ್ರೀಯ ಮಟ್ಟದಲ್ಲಿ ಹಿಂದೂ ಮಾನವ ಹಕ್ಕುಗಳಿಗೆ ಸಂಬಂಧಿಸಿದ ಪ್ರಭಾವಶಾಲಿ ಸಂಘ ಸಂಸ್ಥೆಗಳು ವಿರಳ. ಉಳಿದ ಸಮುದಾಯಗಳ ಮೇಲೆ ದೌರ್ಜನ್ಯಗಳಿಗೆ ಆತಂಕಕಾರಿ ಕ್ಯಾಂಡಲ್ ಲೈಟ್ ಮಾರ್ಚ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಖಂಡನೆ. ಆದರೆ, ಹಿಂದೂಗಳ ಮೇಲೆ ದೌರ್ಜನ್ಯ ನಡೆದರೆ, ಹಿಂದೂಗಳೆ ಸುಮ್ಮನಿರುವರು. ಇತ್ತೀಚೆಗೆ ನಡೆದ ಶ್ರದ್ಧ ಅತ್ಯಾಚಾರ ಮತ್ತು ಕೊಲೆ ಪ್ರಕರಣವನ್ನು ರಾಜಸ್ಥಾನ ಮುಖ್ಯಮಂತ್ರಿ ಅದೊಂದು ಆಕಸ್ಮಿಕ ಸಾವು ಎಂದಿದ್ದು ನೋವು ತರೆಸುವ ವಿಷಯ.

ವಿವಿಧ ಧರ್ಮಗಳ ನಡುವೆ ಸಾಮರಸ್ಯ ಮೂಡಲು ಪರಸ್ಪರ ಹಕ್ಕುಗಳ ಬಗ್ಗೆ ಗೌರವ ಅನಿವಾರ್ಯವಾಗಿದೆ. ನಮ್ಮ ವೈಯಕ್ತಿಕ ಹಕ್ಕುಗಳು ಮತ್ತು ಸಾಮುದಾಯಿಕ ಹಕ್ಕುಗಳು ಉಳಿದವುಗಳಿಗಿಂತ ಶ್ರೇಷ್ಠ ಎಂಬ ಭಾವನೆಯಿಂದಾಗಿ ಸಾಮರಸ್ಯ ಸಾಧ್ಯವಿಲ್ಲ. ಅಂತರಾಷ್ಟ್ರೀಯ ಹಸ್ತಕ್ಷೇಪ ಮತ್ತು ನಾಗರೀಕ ಸಮಾಜ ಹಿಂದೂ ಸಮಾಜ ಎಲ್ಲರಂತೆ ತಮ್ಮ ಹಕ್ಕುಗಳನ್ನು ಅನುಭವಿಸಲು ಅವಕಾಶ ನೀಡದಿರುವುದು ಖೇದಕರ ವಿಷಯ. ರಾಷ್ಟ್ರೀಯ ಮತ್ತು ರಾಜ್ಯ ಮಾನವ ಹಕ್ಕುಗಳ ಆಯೋಗಕ್ಕೆ ಬರುವ ಹೆಚ್ಚಿನ ಪಾಲಿನ ಪ್ರಕರಣಗಳು ಜಾತಿ ಆಧಾರಿತವಾಗಿರುವುದನ್ನು ಕಾಣಬಹುದು. ಒಂದೆಡೆ ಹಿಂದೂಗಳಂತೆ ಉಳಿದ ಸಮುದಾಯಗಳು ಸಮೀಕರಣಗೊಳ್ಳುವ ಅಥವಾ ಸಹಿಷ್ಣುತೆ ಮನೋಭಾವ ಬೆಳೆಸುವುದಿಲ್ಲ; ಮತ್ತೊಂದೆಡೆ, ಹಿಂದೂಗಳನ್ನು ಬಲಿಪಶು ಮಾಡುವ ಮತ್ತು ಉಳಿದ ಸಮುದಾಯಗಳನ್ನು ಓಲೈಸುವ ವಾಸ್ತವಾಂಶ ಹಿಂದೂಗಳು ಉಳಿದವರಂತೆ ಮಾನವ ಹಕ್ಕುಗಳನ್ನು ಅನುಭವಿಸುವುದನ್ನು ಸ್ಥಳೀಯ, ಪ್ರಾದೇಶಿಕ, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಕಷ್ಟ ಸಾಧ್ಯ ಮಾಡಿದೆ. ರಾಷ್ಟ್ರವಾದ ಚಿಂತನೆಗಳನ್ನು ಕಳಂಕಿತಗೊಳಿಸುವುದು; ವಂದೇ ಮಾತರಂ ಎಂದವರನ್ನೆಲ್ಲ ಫ್ಯಾಸಿಸ್ಟ್ ಮನಸ್ಥಿತಿ ಉಳ್ಳವರು ಎಂದು ತಿಳಿದಿರುವವರ ಮನಸ್ಥಿತಿ ಬದಲಾಯಿಸಲು ಸಾಧ್ಯವೇ?

ವಿಶ್ವ ಗುರು ಭಾರತದ ಪರಿಕಲ್ಪನೆಗೆ ಪ್ರಸ್ತುತ ಸಿಗುತ್ತಿರುವ ಪ್ರಾಮುಖ್ಯತೆ, ವಸುದೈವ ಕುಟುಂಬಕಂ ಘೋಷಣೆಯನ್ನು G-20 ಯಂತಹ ವೇದಿಕೆಯಲ್ಲಿ One Earth, One Family, One Future ರೀತಿಯಲ್ಲಿ ಮುಂದಿಡುವುದು; ಭಾರತ International Solar Allianceನ ಅಧಿಪತ್ಯ ವಹಿಸುವ ಮೂಲಕ ಸುಸ್ಥಿರ ಅಭಿವೃದ್ಧಿಗೆ ಭಾರತದ ಕೊಡುಗೆ ಮತ್ತು ನಮ್ಮಲಿನ demographic dividend ಇನ್ನು ಮುಂದಾದರು ಹಿಂದೂಗಳಿಗೆ ಸಿಗಬೇಕಾದ ಹಕ್ಕುಗಳನ್ನು ದೊರಕಿಸಿ ಕೊಡಲಿ ಎಂಬ ಆಶಯವು ನಮ್ಮ ಮುಂದಿಟ್ಟಿದೆ. ಭಾರತ ಸಮಾಜದ ಒಂದು ಉದಾಹರಣೆ ನೀಡುವುದಾದರೆ, ಮಂಗಳೂರು ಮಲ್ಲಿಗೆ ಬೆಳೆಯುವವರು ಕ್ರೈಸ್ತರು, ಮಾರುಕಟ್ಟೆಯಲ್ಲಿ ಮಾರಾಟ ಮಾಡುವವರು ಮುಸ್ಲೀಮರು ಮತ್ತು ಹೆಚ್ಚಾಗಿ ಬಳಸುವುದು ಹಿಂದೂ ದೇವಾಲಯಗಳಲ್ಲಿ. ಇಂತಹ ಸೌಹಾರ್ದತೆ ಒಂದು ಲವ್ ಜಿಹಾದ್ ಪ್ರಕರಣದಿಂದ ಕದಡುವುದು ಕಾಣಬಹುದು.

ಎಲ್ಲ ಸಮುದಾಯದವರು ಎಲ್ಲರ ಹಕ್ಕುಗಳನ್ನು ಗೌರವಿಸಿದರೆ ಈ ಸಹಬಾಳ್ವೆ ವಿಶ್ವಕ್ಕೆ ಮಾದರಿಯಾದೀತೇನೋ! ಮಾನವ ಹಕ್ಕುಗಳು ಸಾರ್ಥಕ ಎನಿಸಿಕೊಳ್ಳುತ್ತಿತ್ತು. ಶ್ವೇತಾಶ್ವತಾರಾ ಉಪಾನಿಷದ್‌ನಲ್ಲಿ ಉಲ್ಲೇಖವಿರುವಂತೆ ಅಮೃತಸ್ಯ ಪುತ್ರಃ ವಯಾಮ್ (ಮನುಷ್ಯ ದೈವ ಸಂಭೂತ) ಭಾರತೀಯರು ಪ್ರತಿ ಜೈವಿಕ–ಅಜೈವಿಕ ವಸ್ತುಗಳಲ್ಲಿ ದೈವಾಂಶ ಗುರುತಿಸಿ, ಎಲ್ಲರನ್ನು ಗೌರವಿಸುವುದು ಮಾನವ ಹಕ್ಕುಗಳಿಗೆ ನಮ್ಮ ಪರಂಪರೆ ನೀಡುವ ಮಾನ್ಯತೆಗೆ ಹಿಡಿದ ಕನ್ನಡಿಯಾಗಿದೆ. UDHRನಲ್ಲಿನ 30 ವಿಧಿಗಳು ಎಲ್ಲರಿಗೆ ಅನ್ವಯಿಸುವಂತೆ ಹಿಂದೂಗಳಿಗೂ ನಿಜ ಅರ್ಥದಲ್ಲಿ ಅನ್ವಯಿಸಿದರೆ ಶಾಂತಿ–ಸಮಚಿತ್ತತೆಯ ದೇಶಕ್ಕೆ ಸಿಗುವ ಕೊಡುಗೆಯಾಗಬಹುದು.

ಅಂತರಾಷ್ಟ್ರೀಯ ಮಟ್ಟದಲ್ಲಿ ಅಲ್ಪಸಂಖ್ಯಾತರಾಗಿರುವ ಹಿಂದೂಗಳಿಗೇಕಿಲ್ಲ ಮಾನವ ಹಕ್ಕುಗಳು? ಸಾಮ್ರಾಟ ಅಶೋಕ ಕಳಿಂಗ ಯುದ್ಧವನ್ನು ಪರ್ಯಾಯ ದೃಷ್ಟಿಕೋನದಲ್ಲಿ ನೋಡಿದ್ದು, ಮೌರ್ಯ ಸಾಮ್ರಾಜ್ಯದ ಏಕತೆ ಮತ್ತು ಸಮಗ್ರತೆ ಮುಂದುವರಿಸಿದ್ದರೆ, ಹಿಂದೂಗಳ ಸಂಖ್ಯೆ ಇಷ್ಟು ಕ್ಷೀಣಿಸುತ್ತಿರಲ್ಲಿವೇನೋ; ನಮ್ಮ ಸಂಪತ್ತು ಲೂಟಿ ಮಾಡಲು ವಿದೇಶಿ ಆಕ್ರಮಣಕಾರರಿಗೆ ಕಷ್ಟವಾಗಿರುತ್ತಿತ್ತೇನೋ; ನಮ್ಮ ನಳಂದ, ತಕ್ಷಶಿಲ ವಿಶ್ವವಿದ್ಯಾಲಯಗಳು ನಮ್ಮ ಬೌದ್ಧಿಕ ಸಾಮರ್ಥ್ಯ ಮತ್ತು ಆಧ್ಯಾತ್ಮಿಕತೆಯನ್ನು ಸಾರುವ, ಸಾರ್ವತ್ರಿರ ಮಾನವ ಹಕ್ಕುಗಳಿಗೆ ಧ್ವನಿಯಾಗಲು ಮತ್ತಷ್ಟು ಬಲ ನೀಡುತ್ತಿತ್ತೇನೋ? ಇತಿಹಾಸದ ತಪ್ಪುಗಳನ್ನು ಸರಿಮಾಡಲು ಸಾಧ್ಯವಿರದಿರಬಹುದು, ದೋಚಿದ ಸಂಪತ್ತು ಹಿಂದಿರುಗಿಸಲೂ ಆಗದಿರಬಹುದು ಆದರೆ ಹಿಂದೂ ಅಸ್ಮಿತೆ ಉಳಿಸಿಕೊಳ್ಳಲು, ಸುಭೀಕ್ಷ, ಶಾಂತಿಯುತ ಪರಿಸರದಲ್ಲಿ ಜೀವಿಸಲು ಎಲ್ಲರಿಗೂ ಅವಕಾಶ ನೀಡಿದರೆ ಅಂತರಾಷ್ಟ್ರೀಯ ಮಾನವ ಹಕ್ಕುಗಳ ದಿನ ಸಾರ್ಥಕವಾಗುವುದು.

**– ಡಾ. ಚೈತ್ರ ಸಿ.,** ತುಮಕೂರು

# ಸಂಸ್ಮರಣೆ

# ಸಮಾಜ ಸುಧಾರಕ ವಿನಾಯಕ ದಾಮೋದರ್ ಸಾವರ್ಕರ್ (28.05.1883 – 26.02.1966)

ಸ್ವಾತಂತ್ರ್ಯವೀರ ಸಾವರ್ಕರರದ್ದು ಬಹು ಆಯಾಮಗಳ ವ್ಯಕ್ತಿತ್ವ. ಅದರಲ್ಲಿಯೂ ಹಿಂದೂ ಸಮಾಜ ಸುಧಾರಕನಾಗಿ, ಕಾರಣಾಂತರಗಳಿಂದ ಮತಾಂತರಗೊಂಡು ಮಾತೃಧರ್ಮದಿಂದ ವಿಮುಖರಾದವರನ್ನು ಮರಳಿ ತಾಯಮಡಿಲಿಗೆ ಮರಳಿತರುವ 'ಶುದ್ಧಿ'ಗಾಗಿ ಅವರು ಮಾಡಿದ ಪ್ರಯತ್ನಗಳು ಅನನ್ಯ.

ಸ್ವಾತಂತ್ರ್ಯ, ಸಾಮಾಜಿಕ ಸುಧಾರಣೆ, ಹಿಂದುತ್ವ ಮತ್ತು ಮಾನವತಾವಾದಗಳು ಅವರ ಜೀವನದ ಪ್ರೇರಕ ತತ್ವಗಳಾಗಿದ್ದವು. ಬಹುಶಃ ಈ ನಾಲ್ಕೂ ತತ್ವಗಳೊಡನೆ 'ಶುದ್ಧಿ'ಯ ಸಂಬಂಧ ಹಾಸುಹೊಕ್ಕಾಗಿ ಒಡಮೂಡಿದ್ದರಿಂದಲೇ ಅವರಿಗಿದು ಆಸ್ಥೆಯ ವಿಷಯವಾಗಿತ್ತು. ಅವರು ಸಮರ್ಥಿಸಿದ ಇತರೆ ವಿಚಾರಗಳಂತೆಯೇ 'ಶುದ್ಧಿ'ಯ ವಿಷಯದಲ್ಲಿಯೂ ಅವರ ಸೈದ್ಧಾಂತಿಕ ಮತ್ತು ವ್ಯಾವಹಾರಿಕ ಯೋಗದಾನಗಳಿವೆ. ಲೇಖನ, ಭಾಷಣ, ನಾಟಕಗಳಂತಹ ಭಿನ್ನಭಿನ್ನ ಮಾಧ್ಯಮಗಳನ್ನು ಉಪಯೋಗಿಸುವುದರ ಮೂಲಕ 'ಶುದ್ಧಿ'ಯ ಸೈದ್ಧಾಂತಿಕ ಪಕ್ಷವನ್ನು ಮುಂದಿರಿಸಿದರು. ಹಿಂದು ಜಾಗೃತಿ, ಹಿಂದು ರಕ್ಷಣೆ, ಹಿಂದು ವರ್ಧನೆ ಮತ್ತು ಹಿಂದುಗಳ ಪೋಷಣೆ ಶುದ್ಧಿಯ ಈ ನಾಲ್ಕೂ ಆಯಾಮಗಳಿಗೆ ಸಲ್ಲುವಂತಹ ಕಾರ್ಯವನ್ನು ವೀರರು ನಿರ್ವಹಿಸಿದರು. ಸ್ವತ: ತಾವೇ ಶುದ್ಧಿಕಾರ್ಯದಲ್ಲಿ ತೊಡಗಿಸಿಕೊಂಡಿದ್ದಲ್ಲದೇ ಮಸುರ್ಕರ್ ಮಹಾರಾಜರಂತಹ ಅನ್ಯರನ್ನೂ ಶುದ್ಧಿಕಾರ್ಯದಲ್ಲಿ ತೊಡಗಿಕೊಳ್ಳುವ ಪ್ರೇರಣೆಯನ್ನು ನೀಡಿದರು.



ಅಂಡಮಾನಿನ ನರಕಸದೃಶ 'ಸೆಲ್ಯುಲರ್ ಜೈಲ್'ನಲ್ಲಿ ವೀರರು ಮತ್ತು ಅವರ ಹಿರಿಯಣ್ಣ ಗಣೇಶ್ ಸಾವರ್ಕರರು ಕೈಗೊಂಡ ಶುದ್ಧಿಯ ಕಾರ್ಯ ಅನುಪಮವಾಗಿದೆ. 'ನನ್ನ ಆಜೀವನ ಕಾರಾವಾಸ' ಎಂಬ ಅವರ ಆತ್ಮಕಥನದಲ್ಲಿ 'ಅಂಡಮಾನ್‌ನಲ್ಲಿ ಶುದ್ಧಿ' ಎಂಬ ಸ್ವತಂತ್ರ ಅಧ್ಯಾಯವಿದೆ. ಕಿರಿವಯಸ್ಸಿನ ಹಿಂದೂ ಕೈದಿಗಳನ್ನು ಆಮಿಷಗಳಿಂದ ಇಲ್ಲವೇ ಘೋರ ಅಮಾನವೀಯ ಯಾತನೆಗಳ ಮೂಲಕ ಮುಸ್ಲಿಂ ಜೈಲು ಸಿಬ್ಬಂದಿಗಳು ಮತಾಂತರಕ್ಕೆ ಎಳಸುತ್ತಿದ್ದ ಕುರಿತಾದ ವಿವರಣೆಗಳು ಆ ಅಧ್ಯಾಯದಲ್ಲಿವೆ. ಈ ರೀತಿಯಲ್ಲಿ ಮುಸ್ಲಿಮರಾಗಿದ್ದ ಅನೇಕ ಹಿಂದುಗಳನ್ನು ಬಾಬಾರಾವ್ ಮತ್ತು ವೀರರು ಶುದ್ಧಗೊಳಿಸಿದ್ದರು. ಮತಾಂತರಿತರಿಗೆ ಸ್ನಾನಮಾಡಲು ತಿಳಿಸಿ ಆವರಿಗೆ ತುಳಸಿ ಪತ್ರವನ್ನು ತಿನ್ನಲು ನೀಡಲಾಗುತ್ತಿತ್ತು. ಇದರ ನಂತರ ವೀರರು ತುಳಸಿ ರಾಮಾಯಣದ ಅಥವಾ ಭಗದ್ಗೀತೆಯ ಪಠಣಮಾಡುತ್ತಿದ್ದರು. ಗುಪ್ತವಾಗಿ ತಯಾರಿಸಿದ ಪ್ರಸಾದವನ್ನು ಶುದ್ಧೀಕೃತರಿಗೆ ತಿನ್ನಿಸಲಾಗುತ್ತಿತ್ತು ಮತ್ತು ಅವರ ಹಿಂದೂ ಹೆಸರಿನಿಂದಲೇ ಕರೆಯಲಾಗುತ್ತಿತ್ತು. ಅಂಡಮಾನ್‌ನಲ್ಲಿ ಸಿಲೋನಿನಿಂದ ಬಂದಿದ್ದ ಓರ್ವ ಕ್ರೈಸ್ತನನ್ನು ವೀರರು ಹಿಂದೂವಾಗಿ ಶುದ್ಧೀಕರಿಸಿದರು. ಸಾವರ್ಕರ್ ಬಂಧುಗಳು ಸೆಲ್ಯುಲರ್ ಜೈಲಿನಲ್ಲಿ ಮಾಡಿದ ಈ ಪ್ರಯತ್ನಗಳು ವಿಪ್ಲವವನ್ನೇ ಸೃಷ್ಟಿಸಿದವು. ಬಾಬಾರಾವರ ಮೇಲೆ ಪ್ರಾಣಾಂತಿಕ ಹಲ್ಲೆಯಾಯಿತು. ಆದರೂ, ಬಂಧುಗಳಿಬ್ಬರೂ ಗಟ್ಟಿಯಾಗಿ ನಿಂತುಕೊಂಡಿದ್ದರು.

ಅಂಡಮಾನ್‌ನಿಂದ ಬಿಡುಗಡೆಯಾಗಿ ವೀರರು ರತ್ನಾಗಿರಿಯನ್ನು 8 ಜನವರಿ 1924ರಂದು ತಲುಪಿದರು. ರತ್ನಾಗಿರಿ ಜಿಲ್ಲೆಯನ್ನು ದಾಟದಂತೆ ಮತ್ತು ರಾಜನೈತಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳದಂತೆ ಅವರ ಮೇಲೆ ನಿರ್ಬಂಧನೆಗಳನ್ನು ಹೇರಲಾಗಿತ್ತು.

23ನೇ ಜನವರಿಯಂದು ಬಾಬಾರಾವ್ ರತ್ನಾಗಿರಿ ಹಿಂದೂ ಸಭೆಯನ್ನು ಸ್ಥಾಪಿಸಿದರು. ಇದಕ್ಕೆ ವೀರರೇ ಪ್ರೇರಣಾಸ್ರೋತವಾಗಿದ್ದರು.

ರತ್ನಾಗಿರಿ ಹಿಂದೂ ಸಭೆಯ ಎರಡನೇ ಸಭೆಯಲ್ಲಿಯೇ ಕ್ರೈಸ್ತನಾಗಿದ್ದ ಓರ್ವ ಸಜ್ಜನನ ಶುದ್ಧಿಯ ವಿಷಯವನ್ನು ವಿಚಾರಣೆಗೆ ತೆಗೆದುಕೊಳ್ಳುವ ಪ್ರಸ್ತಾವನೆ ಬಂದಿತು. ದಿ. 16, 17, 18 ಮಾರ್ಚ್ 1924ರ ನಾಗಪುರದ 'ಸ್ವಾತಂತ್ರ್ಯ' ಎಂಬ ದೈನಿಕದಲ್ಲಿ (ಸಂಪಾದಕ: ಡಾ. ಹೆಡಗೆವಾರ್) ವೀರರು ಸಿಂಧ್‌ನ ಸಂಯೋಗಿ ಜಾತಿಯ ಕುರಿತಾಗಿ ಬರೆದಿದ್ದ 3 ಲೇಖನಗಳು ಪ್ರಕಟಗೊಂಡವು. ಇದರಲ್ಲಿ ಹಿಂದೂ ಹೆಸರು ಮತ್ತು ರೀತಿಗಳನ್ನು ಧಾರಣೆಮಾಡುವ ಈ ಮತಾಂತರಿತ ಜಾತಿಯ ಬಗ್ಗೆ ಮಾಹಿತಿ ಮತ್ತು ಅದರ ಶುದ್ಧಿಯ ಕುರಿತಾದ ವ್ಯಾವಹಾರಿಕ ಸೂಚನೆಗಳನ್ನು ನೀಡಲಾಗಿತ್ತು. 17 ಏಪ್ರಿಲ್ 1924ರಂದು ಶ್ರೀ ಕ್ಷೇತ್ರ ಪರಶುರಾಮ್‌ನಲ್ಲಿ ಅವರು ಮಾಡಿದ ಮೊದಲ ಸಾರ್ವಜನಿಕ ಭಾಷಣದ ವಿಷಯ 'ಶುದ್ಧಿ ಮತ್ತು ಅಸ್ಪೃಶ್ಯೋದ್ಧಾರ' ಎಂದಾಗಿತ್ತು.

ಸ್ವಾಮೀ ಶ್ರದ್ಧಾನಂದರ ಹತ್ಯೆಯಿಂದ ಮನನೊಂದ ಸಾವರ್ಕರ್ ಬಂಧುಗಳು 10 ಜನವರಿ 1927ರಂದು ಮುಂಬೈನಲ್ಲಿ 'ಶ್ರದ್ಧಾನಂದ' ಹೆಸರಿನ ಸಾಪ್ತಾಹಿಕವನ್ನು ಪ್ರಾರಂಭಿಸಿದರು. ಅಸ್ಪೃಶ್ಯತೆಯ ನಿವಾರಣೆ ಮತ್ತು ಶುದ್ಧಿಯನ್ನು ಸಮರ್ಥಿಸುವ ಕಥಾವಸ್ತುವುಳ್ಳ 'ಸಂಗೀತ ಉ:ಶಾಪ' ಎಂಬ ನಾಟಕವನ್ನು ವೀರರು ರಚಿಸಿದರು. ಇದರ ಮೊದಲ ಪ್ರಯೋಗ 9 ಏಪ್ರಿಲ್ 1927ರಂದು ನಡೆಯಿತು. ವೀರರ ಹಸ್ತಲಿಖಿತ ಪುಸ್ತಕದಲ್ಲಿ ಸಂಪೂರ್ಣ ಶುದ್ಧಿವಿಧಿಯ ವಿವರಣೆ ದೊರಕಿತು. ಇದರಲ್ಲಿ ಅತ್ರಿಸ್ಮೃತಿಯನ್ನು ಆಧಾರವಾಗಿರಿಸಲಾಗಿದೆ.

ಹಾಗೆ ನೋಡಿದಲ್ಲಿ, ರತ್ನಾಗಿರಿಗೆ ಅವರ ಆಗಮನವಾಗುತ್ತಲೇ ಗುಪ್ತವಾಗಿ ಅವರು ಶುದ್ಧಿಕಾರ್ಯವನ್ನು ಪ್ರಾರಂಭಿಸಿಯಾಗಿತ್ತು. 1925 ರಿಂದ ಈ ಕೆಲಸವನ್ನು ಬಹಿರಂಗವಾಗಿ ಮಾಡತೊಡಗಿದರು. 1924 ರಿಂದ 1928ರ ಅವಧಿಯೊಳಗೆ ಅವರು ಸುಮಾರು 130 ಅಹಿಂದುಗಳ ಶುದ್ಧೀಕರಣ ಪೂರ್ಣಗೊಳಿಸಿದ್ದರು. 25 ಮೇ 1926 ರಂದು ಅವರಿಂದಾದ 8 ಸದಸ್ಯರಿದ್ದ ಧಾಕ್ರಸ್ ಪರಿವಾರದ ಶುದ್ಧಿಯು ದೊಡ್ಡ ಚರ್ಚೆಯನ್ನು ಹುಟ್ಟುಹಾಕಿತು. ಈ ಬ್ರಾಹ್ಮಣ ಕುಟುಂಬ 15 ವರ್ಷಕ್ಕೆ ಮುಂಚೆ ಕ್ರೈಸ್ತಮತಕ್ಕೆ ಮತಾಂತರಗೊಂಡಿತ್ತು. ಶುದ್ಧಿಯ ಸಂದರ್ಭದಲ್ಲಿ ವೀರರ ವಿಚಾರ ಮತ್ತು ಕೆಲಸಗಳನ್ನು ಕಂಡು ಪ್ರಭಾವಿತರಾದ ಕುಟುಂಬದ ಮುಖ್ಯಸ್ಥರಿಗೆ ಪರಿವಾರದ ಸಮೇತ ಮತ್ತೆ ಹಿಂದೂ ಧರ್ಮಕ್ಕೆ ಮರಳುವ ಮನಸ್ಸಾಯ್ತು. ಈ ಕಾರ್ಯಕ್ರಮ ಅತ್ಯಂತ ವಿಜೃಂಭಣೆಯಿಂದ ರತ್ನಾಗಿರಿಯ ವಿಠಲನ ಮಂದಿರದಲ್ಲಿ ನಡೆಯಿತು. ಕಾರ್ಯಕ್ರಮದ ನಂತರ ಪ್ರತಿಷ್ಠಿತ ನಾಗರಿಕರೊಡನೆ ಸಹಭೋಜನವೂ ಆಯೋಜಿತವಾಗಿತ್ತು. ಒಂದು ವರ್ಷದ ತರುವಾಯ ಧಾಕ್ರಸ್ ಪರಿವಾರದ ಮಗಳ ಮದುವೆಯ ಪ್ರಶ್ನೆ ಎದ್ದಾಗ ವೀರರ ತಮ್ಮ ಡಾ.ನಾರಾಯಣರವರ ಓರ್ವ ಮಿತ್ರ ಆಕೆಯನ್ನು ಮದುವೆಯಾದ. ಸ್ವತಃ ಸಾವರ್ಕರರೇ ಕನ್ಯಾದಾನವನ್ನು ನೆರವೇರಿಸಿದರು. ಧಾಕ್ರಸ್ ಪರಿವಾರದ ಇಬ್ಬರು ಗಂಡುಮಕ್ಕಳ ಯಜ್ಞೋಪವೀತದ ಸಂದರ್ಭದಲ್ಲಿಯೂ ವೀರರು ಉಪಸ್ಥಿತರಿದ್ದರು.

ಸ್ಥಳೀಯರು ಈ ಪರಿವಾರಕ್ಕೆ ಬಹಿಷ್ಕಾರ ಹಾಕಿದಾಗ ಸ್ವತಃ ಸಾವರ್ಕರರೇ ಅವರ ಮನೆಯಲ್ಲಿ ಉಳಿದುಕೊಂಡರು. ಆ ಕಾಲಕ್ಕೆ ಸಾವರ್ಕರರ ತಿಂಗಳ ಆದಾಯ 60 ರೂ. ಮಾತ್ರ. ಆದರೆ, ಧಾಕ್ರಸ್ ಪರಿವಾರದ ಈ ಸಮಾರಂಭಗಳ ವೆಚ್ಚಕ್ಕೆಂದು ಅವರು 1013 ರೂ.ಗಳನ್ನು ವ್ಯಯಿಸಿದ್ದರು. ಮಸುರಾಶ್ರಮ ಗೋವೆಯಲ್ಲಿ ಕೈಗೊಂಡಿದ್ದ ಶುದ್ಧಿಕಾರ್ಯದ ಸಮರ್ಥನೆಗೆ ಸಾವರ್ಕರರು ರತ್ನಾಗಿರಿಯಲ್ಲಿ ನಿಧಿಸಂಗ್ರಹ ಅಭಿಯಾನವನ್ನು ನಡೆಸಿದರು. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಈ ನಿಧಿಗೆ ತಥಾಕಥಿತ ಅಸ್ಪ್ರಶ್ಯ ಮಹಾರ್ ಜಾತಿ 37 ರೂಪಾಯಿಗಳ ದೇಣಿಗೆಯನ್ನು ನೀಡಿತ್ತು.

21 ಆಗಸ್ಟ್ 1955 ರಂದು ಪುರಿಯ ಶಂಕರಾಚಾರ್ಯರ ಅಧ್ಯಕ್ಷತೆಯಲ್ಲಿ ಮುಂಬೈನ ದಾದರ್‌ನಲ್ಲಿಯ 40 ಮೀನುಗಾರರ ಶುದ್ಧೀಕರಣ ನಡೆಯಿತು. ಅಲ್ಲಿನ ತಮ್ಮ ಭಾಷಣದಲ್ಲಿ ವೀರರು ಹೀಗೆ ಹೇಳುತ್ತಾರೆ : 'ನಮ್ಮ ಭಾರತ ವರ್ಷದಲ್ಲಿ ಈ ಶುದ್ಧಿಕಾರ್ಯಕ್ಕೆ ಇರುವ ಮಹತ್ವ ಎಷ್ಟೆಂದರೆ ಇದಕ್ಕಾಗಿ ನನಗೆ ಪುನರ್ಜನ್ಮ ಸಿಗಬೇಕು'. ದಿನಾಂಕ 1 ಆಗಸ್ಟ್ 1964ರಂದು ಬರೆದ ತಮ್ಮ ಮೃತ್ಯುಪತ್ರದಲ್ಲಿ ವೀರರು ಶುದ್ಧಿಕಾರ್ಯಕ್ಕಾಗಿ ಕೆಲಸಮಾಡುವ ಸಂಸ್ಥೆಗಳಿಗೆಂದು ಪ್ರತಿವರ್ಷ ಆರ್ಥಿಕ ಸಹಾಯ ನೀಡುವ ನಿರ್ದೇಶನ ಕೊಟ್ಟಿದ್ದರು.

## ಎಲ್ಲೋ ಕೇಳಿದ ಕಥೆ

ಒಮ್ಮೆ ಇಬ್ಬರು ನೆರೆಹೊರೆಯ ರಾಜರು ರಥದಲ್ಲಿ ಪ್ರಯಾಣಿಸುತ್ತಾ ಒಂದು ಇಕ್ಕಟ್ಟಾದ ಸೇತುವೆಯ ಮೇಲೆ ಎದುರಾದರು. ಆದರೆ ಇಬ್ಬರಲ್ಲಿ ಯಾರೂ ತಮ್ಮ ರಥವನ್ನು ಹಿಂದೆಗೆಯಲು ಸಿದ್ಧರಿರಲಿಲ್ಲ. ಕೊನೆಗೆ ಇಬ್ಬರ ರಾಜರ ಸಾರಥಿಯರು ಒಂದು ಒಪ್ಪಂದಕ್ಕೆ ಬಂದರು. ಇಬ್ಬರೂ ತಮ್ಮ ರಾಜನ ಸತ್ಕಾರ್ಯಗಳನ್ನು ಹೇಳುವುದು. ಹೆಚ್ಚಿನ ಸತ್ಕಾರ್ಯಗಳನ್ನು ಮಾಡಿರುವ ರಾಜ ಮುಂದೆ ಹೋಗುವುದು. ಇನ್ನೊಬ್ಬ ರಥವನ್ನು ಹಿಂತೆಗೆದುಕೊಳ್ಳುವುದು.

ಮೊದಲನೆಯ ರಾಜನ ಸಾರಥಿ ಹೇಳಿದ, ನಮ್ಮ ಮಹಾರಾಜರು ಪ್ರತಿದಿನವೂ ಕನಿಷ್ಟ ಒಂದು ನೂರು ಜನ ಹಸಿವೆಯಿಂದ ಬಳಲುವ ಅಭಾಗ್ಯರಿಗೆ ಭೋಜನ ಏರ್ಪಡಿಸಿದ ನಂತರವೇ ತಾವು ಭೋಜನ ಮಾಡುತ್ತಾರೆ. ತೊಡಲು ಬಟ್ಟೆ ಇಲ್ಲದ ನಿರ್ಗತಿಕರು ಕನಿಷ್ಠ ಐದುನೂರು ಜನರಿಗೆ ಬಟ್ಟೆ ಹಂಚುತ್ತಾರೆ. ರಾಜ್ಯದಲ್ಲಿ ಅನೇಕ ಅನಾಥಾಲಯಗಳನ್ನು ಮತ್ತು ವೃದ್ಧಾಶ್ರಮಗಳನ್ನು ಕಟ್ಟಿಸಿರುತ್ತಾರೆ. ಬಡಬಗ್ಗರಿಗೆ, ರಿಯಾಯಿತಿ ದರದಲ್ಲಿ ಧಾನ್ಯಗಳು ಸಿಗುವ ಏರ್ಪಾಟು ಮಾಡಿದ್ದಾರೆ.


ಇಷ್ಟು ಹೇಳಿದ ನಂತರ ಎರಡನೇ ರಾಜನ ಸಾರಥಿಯು, ತಲೆ ಬಗ್ಗಿಸಿ, ಕಣ್ಣಲ್ಲಿ ನೀರಿಡುತ್ತಾ ತನ್ನ ರಥವನ್ನು ಹಿಂತೆಗೆಯಲು ಅನುವಾದ. ಅದನ್ನು ನೋಡಿ, ಆ ಮೊದಲನೆಯ ರಾಜ ಕೇಳಿದನು, "ಸಾರಥಿ, ಹೀಗೇಕೆ ಒಮ್ಮಿಂದೊಮ್ಮೆ ರಥವನ್ನು ಹಿಂತೆಗೆಯಲು ಸಿದ್ಧನಾಗಿರುವೆ? ನಿಮ್ಮ ರಾಜನಲ್ಲಿ ಯಾವ ದಾನಗುಣವೂ ಇಲ್ಲವೇ ?"

ಅದಕ್ಕೆ ಎರಡನೇ ರಾಜನ ಸಾರಥಿ ಹೀಗೆ ಉತ್ತರಿಸಿದ, "ರಾಜಾ, ನಮ್ಮ ರಾಜ್ಯದಲ್ಲಿ ನಮ್ಮ ಅರಸು ದಾನ ಕೊಡುತ್ತಿರುವುದನ್ನು ನೋಡುವ ಅದೃಷ್ಟ ಯಾರಿಗೂ ಸಿಕ್ಕಿಲ್ಲ. ನಮ್ಮ ರಾಜ್ಯದಲ್ಲಿ, ದಾನ ಮಾಡಬೇಕೆಂದರೆ ದಾನ ಸ್ವೀಕರಿಸಲು ದೀನರಿಲ್ಲ. ಯಾವ ವೃದ್ಧರಿಗೂ ವೃದ್ಧಾಶ್ರಮ ಸೇರುವ ಅವಶ್ಯಕತೆ ಬಂದಿಲ್ಲ. ಹೀಗಾಗಿ ನಮ್ಮ ರಾಜರಿಗೆ ದಾನ ಮಾಡುವ ಅವಕಾಶ ಹೇಗೆ ಸಿಗಬೇಕು? ಇದನ್ನು ಕೇಳಿ ಮೊದಲನೆಯ ರಾಜನು ತಕ್ಷಣವೇ ತನ್ನ ರಥದಿಂದ ಕೆಳಗಿಳಿದು ಬಂದು ಎರಡನೆಯ ರಾಜನಿಗೆ ನಮಿಸಿ, ತನ್ನ ರಥವನ್ನು ಹಿಂದಕ್ಕೆ ತೆಗೆಸಿದ.

ಸಾವಿರಾರು ವೃದ್ಧಾಶ್ರಮಗಳು, ಉದ್ದೇಶ ಶುದ್ಧಿಯಿರದ ಅಭಿವೃದ್ಧಿ ಕಾರ್ಯಕ್ರಮಗಳು, ಉಚಿತ ಕೊಡುಗೆಯ ಭ್ರಾಮಕ ಯೋಜನೆಗಳು ಮತ್ತು ಇಂತಹ ಕಾರ್ಯಕ್ರಮಗಳಿಗಾಗಿ ಆಸೆಪಡುವ ಪ್ರಜೆಗಳಿರುವ ಯಾವ ದೇಶವೂ ಒಳ್ಳೆಯ ಆಳ್ವಿಕೆಯಲ್ಲಿಲ್ಲ ಎಂದರ್ಥ. ಯಾವ ದೇಶದಲ್ಲಿ ರಿಯಾಯಿತಿಗಳ ಅವಶ್ಯಕತೆಯಿಲ್ಲವೋ, ಅಂತಹ ರಾಷ್ಟ್ರವೇ ಸಂಪನ್ನ ರಾಷ್ಟ್ರ.


## ಬಿಡುಗಡೆಯ ಮಿಂಚು

**ಲೇಖಕರು:** ನಾರಾಯಣ ಶೇವಿರೆ
**ಪ್ರಕಾಶನ:** ಅಯೋಧ್ಯಾ ಪ್ರಕಾಶನ




1947ರಲ್ಲಿ ನಾವು ಪಡೆದದ್ದು ಬಿಡುಗಡೆ ಮಾತ್ರ, ಸ್ವಾತಂತ್ರ್ಯವಲ್ಲ. ಹಲವು ಸಹಸ್ರ ವರ್ಷಗಳ ಸಂಘರ್ಷದ ಇತಿಹಾಸದಲ್ಲಿ ನಾವು ಶಕ, ಹೂಣರು, ಗ್ರೀಕರು, ಡಚ್ಚರು, ಪೋರ್ಚುಗೀಸರು ಮತ್ತು ಫ್ರೆಂಚರಂಥ ಹಲವು ವಿದೇಶೀ ಶಕ್ತಿಗಳಿಂದ ಬಿಡುಗಡೆ ಪಡೆದಿದ್ದೇವೆ. ಆದರೆ ಸ್ವಾತಂತ್ರ್ಯ ಪಡೆದೆವೇ ಎಂದರೆ ಯೋಚಿಸುವಂತಾಗುತ್ತದೆ. ಭಾರತ ನಿಜವಾದ ಸ್ವಾತಂತ್ರ್ಯ ಪಡೆಯಲು ಇರುವ ಅಡ್ಡಿ–ಆತಂಕಗಳೇನು? ನಿಜಸ್ವಾತಂತ್ರ್ಯ ಪಡೆದರೆ ಭಾರತ ಹೇಗೆ ಜಗತ್ತಿನಲ್ಲಿ ವಿಭಿನ್ನವಾಗಿ ನಿಲ್ಲುತ್ತದೆ? – ಎಂಬ ಸಂಗತಿಗಳನ್ನು ಇತಿಹಾಸ–ವರ್ತಮಾನಗಳ ಹಿನ್ನೆಲೆಯಲ್ಲಿ ಚರ್ಚಿಸುವ ಮೌಲಿಕ ಕೃತಿ 'ಬಿಡುಗಡೆಯ ಮಿಂಚು'. ಇತಿಹಾಸದಲ್ಲಿ ನಡೆದುಹೋದ ಘಟನೆಗಳನ್ನು ಪಠ್ಯಪುಸ್ತಕದ ಮಾದರಿಯಲ್ಲಿ ಹೇಳದೆ ಅಲ್ಲಿ ಭಾರತ ಪಡೆದ, ಕಳೆದುಕೊಂಡ ಮುಖ್ಯ ಸಂಗತಿಗಳನ್ನು ಈ ಪುಸ್ತಕವು ದಾಖಲಿಸುತ್ತದೆ. ಗಾಂಧೀಜಿಯವರ ಅಹಿಂಸಾವ್ರತವನ್ನೂ ಅಸಹಕಾರ ಚಳವಳಿಯನ್ನೂ ಇದು ಕಟುವಾಗಿ ವಿಮರ್ಶಿಸುತ್ತದೆ. ಓದುಗರಿಗೆ ಈ ಗ್ರಂಥವು ಇತಿಹಾಸದ ಬಗ್ಗೆ ಹೊಸ ಹೊಳಹುಗಳನ್ನು ಕಾಣಿಸುವುದರಲ್ಲಿ ಸಂಶಯವಿಲ್ಲ.

Buy at: www.ayodhyabooks.com  Call: 9620916996


**ಸಂಪಾದಕೀಯ ಸಹಕಾರ:** ಶೈಲೇಶ್ ಕುಲಕರ್ಣಿ, ಶ್ರೀವತ್ಸ ಶೃಂಗೇರಿ, ಸತ್ಯನಾರಾಯಣ ಶಾನಭಾಗ್, ರಾಧಾಕೃಷ್ಣ ಹೊಳ್ಳ, ತನ್ಮಯೀ ಪ್ರೇಮಕುಮಾರ್, ಸುನಿಲ್ ಕುಲಕರ್ಣಿ

## ತಪಸ್/ಸಾಧನಾ ಪ್ರಕಲ್ಪಕ್ಕೆ ಅರ್ಜಿ ಆಹ್ವಾನ

ರಾಷ್ಟ್ರೋತ್ಥಾನ ಪರಿಷತ್ ನಡೆಸುತ್ತಿರುವ ಉಚಿತ ಶಿಕ್ಷಣ ಯೋಜನೆ – ತಪಸ್ ಹಾಗೂ ಸಾಧನೆ. ಈ ಯೋಜನೆಗಳ ಮೂಲಕ ವಿದ್ಯಾರ್ಥಿಗಳಿಗೆ ಪಿ.ಯು. ಶಿಕ್ಷಣದೊಂದಿಗೆ ಐಐಟಿ–ಜೆಇಇ ಹಾಗೂ ನೀಟ್ ಪ್ರವೇಶ ಪರೀಕ್ಷೆಗಳಿಗೆ ತರಬೇತಿಯನ್ನು ವಸತಿ ಸಹಿತ ಉಚಿತವಾಗಿ ನೀಡಲಾಗುವುದು. ಬಡ ಪ್ರತಿಭಾವಂತ ಮಕ್ಕಳಿಗೆ ಉಚಿತ ಶಿಕ್ಷಣ ನೀಡಲು ಪ್ರವೇಶ ಪರೀಕ್ಷೆಗೆ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಪ್ರಸ್ತುತ 10ನೇ ತರಗತಿ ಓದುತ್ತಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಪ್ರವೇಶ ಪರೀಕ್ಷೆಯು ಡಿಸೆಂಬರ್ 25 ರಂದು ನಡೆಯಲಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನ ಡಿಸೆಂಬರ್ 10. ತಪಸ್– ಗಂಡು ಮಕ್ಕಳಿಗೆ (PU+IIT-JEE). ಸಾಧನಾ – ಹೆಣ್ಣು ಮಕ್ಕಳಿಗೆ (JPU+NEET). ಹೆಚ್ಚಿನ ಮಾಹಿತಿ ಈ ವೆಬ್‌ಸೈಟ್‌ನಲ್ಲಿ ಲಭ್ಯವಿದೆ. www.tapassaadhana.org

**ಸಂಪರ್ಕ: 9481201144/ 9844602529/ 7975913828**




# ಬದಲಾಗುತ್ತಿರುವ ಸಮಾಜಕ್ಕೆ ಶಾಶ್ವತವಾದ ದೃಷ್ಟಿ ನೀಡಿದವರು ಶ್ರೀಗುರೂಜಿ – ಶ್ರೀ ಮುಕುಂದ

**ಬೆಂಗಳೂರು:** 'ವರ್ತಮಾನದಲ್ಲಿ ಶ್ರೀ ಗುರೂಜಿ ಗೋಳ್ವಲ್ಕರ್ ಚಿಂತನೆಗಳ ಪ್ರಸ್ತುತತೆ' ಎನ್ನುವ ವಿಚಾರದ ಕುರಿತು ದಿ ಮಿಥಿಕ್ ಸೊಸೈಟಿಯಲ್ಲಿ ನಡೆದ ನೂರ್ ಅಹಮದ್ ಅಲಿ ಖಾನ್ ಸ್ಮಾರಕ ದತ್ತಿ ಉಪನ್ಯಾಸದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಹಸರಕಾರ್ಯವಾಹರಾದ ಶ್ರೀ ಮುಕುಂದ ಅವರು ಮಾತನಾಡಿದರು.

ಇದು ಕೇವಲ ಒಬ್ಬ ಮಾಧವ ಸದಾಶಿವರಾವ್ ಗೋಳ್ವಲ್ಕರ್ ಚಿಂತನೆಗಳು ವ್ಯಕ್ತ ಆಗಿದ್ದು, ಇದು ಕೇವಲ ವ್ಯಕ್ತಿಯ ಚಿಂತನೆಗಳು ಅಂತ ಸೀಮಿತಗೊಳಿಸಿಕೊಳ್ಳದೆ, ನಾವು ನೋಡಬೇಕಾಗಿರುವುದು ಅದರ ಸತ್ವದ ಕುರಿತು. ಇದನ್ನು ಗುರೂಜಿಯವರು ಹೇಳಿದ್ದು ಹೊಸದಾಗಿ ಏನಲ್ಲ, ಇದು ಸನಾತನ ದೃಷ್ಟಿ, ಭಾರತೀಯ ಮೌಲ್ಯಗಳ ಒಟ್ಟು ಸಾರದ ಚಿಂತನೆ. ಅದು ಗುರೂಜಿಯವರ ಮೂಲಕ ಬಂದದ್ದು, ಅವರ ಬಾಯಿಂದ, ಅವರ ಚಿಂತನೆಗಳಿಂದ ಸುತ್ತಲಿನವರು ಗ್ರಹಿಸಿಕೊಂಡಿದ್ದು ಎಂಬ ರೀತಿಯಲ್ಲಿ ಇದನ್ನು ನೋಡಬೇಕಿದೆ. ಈ ರೀತಿಯ ಚಿಂತನೆಗಳು ಅನೇಕ ಭಾರತೀಯರು ಅದಾಗಲೇ ವ್ಯಕ್ತಪಡಿಸಿದ್ದರು. ಉದಾಹರಣೆಗೆ ದೀನದಯಾಳ ಉಪಾಧ್ಯಾಯರು, ಅರವಿಂದರು, ವಿವೇಕಾನಂದರು ಇನ್ನಿತರರು.




ಗುರೂಜಿಯವರು ಶಾಶ್ವತವಾದ ದೃಷ್ಟಿಯಿಂದ ಚಿಂತಿಸಿದವರು. ಪ್ರಸ್ತುತತೆಯ ವಿಷಯಕ್ಕೆ ಬಂದಾಗ ಸಮಾಜದಲ್ಲಿ ಬದಲಾವಣೆ ಬಹಳವೇ ಆಗಿದೆ. ಸಮಾಜದ ಬೇರೆ ಬೇರೆ ಲೇಯರ್‌ಗಳನ್ನು ನೋಡಿದರೆ ಅದರ ರೂಪ ಕಾಲಾನುಕ್ರಮೇಣ ಬದಲಾಗಿದೆ, ಆದರೆ ಆ ರೂಪಗಳು ಯಾವುದರ ತಳಹದಿಯ ಮೇಲೆ ನಿಂತಿದೆಯೋ ಅದು ಶಾಶ್ವತವಾದುದು. ವ್ಯಕ್ತಿ, ಸಮಾಜ ಬದಲಾಗಬಹುದು, ಆದರೆ ವ್ಯಕ್ತಿಯ, ಸಮಾಜದ ಚಿಂತನೆಯ ದೃಷ್ಟಿಕೋನ ಶಾಶ್ವತವಾದುದು.

ಇಂದು ನಾವು ಬದುಕನ್ನು ನೋಡುವ ರೀತಿ ಏನಾಗಿದೆ? ಭಾರತೀಯರ ಸ್ಟಾಂಡ್ ಪಾಯಿಂಟ್ ಯಾವುದು? ಅಮೆರಿಕದ ದೃಷ್ಟಿಯೇ ಭಾರತಕ್ಕೆ ಬರ್ತಿದೆಯಾ ಎನ್ನುವ ಪ್ರಶ್ನೆಯೂ ಇದೆ. ಅದಕ್ಕೆ ಟೆಕ್ನಾಲಜಿ ಕಾರಣವಾಗಿರಬಹುದು ಅಥವಾ ಮತ್ತೇನೋ ಕಾರಣವೂ ಇರಬಹುದು ಇರಬಹುದು.

ಇನ್ನು ಅಲ್ಲಿನ ಪರಿಭಾಷೆಗಳು ಅಂದರೆ ಲಿಬರಲ್, ವೋಕ್ ಕಲ್ಚರ್, ಫ್ಯಾಸಿಸ್ಟ್ ಇತ್ಯಾದಿಗಳು ಬರಬಹುದು. ಅದರಲ್ಲಿ ಕೆಲವು ಒಳ್ಳೆಯದೂ ಇರಬಹುದು. ಆದರೆ ಭಾರತೀಯವಲ್ಲದ ಈ ಮಾನಸಿಕತೆಗಳಿಂದ ಬದುಕನ್ನು ನೋಡುವ ದೃಷ್ಟಿಕೋನ ಬದಲಾಗುತ್ತಿದೆ. ನಮ್ಮ ಬದುಕಿಗೆ ಈ ವಿಚಾರಗಳು ನೇರವಾಗಿ ತಟ್ಟುತ್ತಿದೆ. ಅದು ಈಗಿನ ಕೇವಲ ಯುವವರ್ಗಕ್ಕೆ ಸೀಮಿತವಾಗಿಲ್ಲ, ನಗರೀಕರಣದ ವ್ಯಾಪ್ತಿಗೆ ಇದು ಬರುತ್ತಿದೆ. ಕೇವಲ ನಮ್ಮ ಸುಖ ನಮಗೆ ಮುಖ್ಯ, ನಾವು ಮಾಡಿದ್ದೆಲ್ಲವೂ ಸರಿ, ನಮಗೆ ಎಲ್ಲದಕ್ಕೂ ವಿನಾಯತಿ ಬೇಕು ಎನ್ನುತ್ತಿದ್ದಾರೆ. ಸಮಾಜದಲ್ಲಿ ನಮ್ಮ ನಡುವೆ ನಾಲ್ಕು ಜನರಿದ್ದಾಗ ಅನುಸರಿಸಿಕೊಂಡು ಹೋಗುವ, ಅವರ ಅಭಿಪ್ರಾಯವನ್ನೂ ಮನ್ನಿಸುವ, ಒಗ್ಗಿಕೊಂಡು ಹೋಗುವ ಗುಣ ಕಾಣೆಯಾಗುತ್ತಿದೆ. ಇದನ್ನು ಗುರೂಜಿ ಕೂಡ ಉಲ್ಲೇಖ ಮಾಡುತ್ತಾರೆ.

ಇನ್ನು ನಮ್ಮದು ಈಗ ಸ್ಪರ್ಧಾತ್ಮಕ ಜಗತ್ತು, competitive world, ಗುರೂಜಿಯವರು ಇದರ ಕುರಿತು ತಮ್ಮ ನಿಲುವುಗಳನ್ನು ವ್ಯಕ್ತಪಡಿಸಿದ್ದಾರೆ. ಅವರು ಹೇಳುತ್ತಾರೆ, "ಈ ಮಾನಸಿಕತೆಯ ಹಿಂದೆ ಇರುವ ಸುಖ ಎನ್ನುವ ಪರಿಕಲ್ಪನೆ ಮನುಷ್ಯನ ಒಳಗೆ ಇದೆ. ಸುಖ ಬಾಹ್ಯ ವಸ್ತುವಿನಲ್ಲಿಲ್ಲ. ಅದು ನಮ್ಮ ಒಳಗೆ ಇದೆ" ಎನ್ನುತ್ತಾರೆ. ಒಂದು ಸಮುದಾಯದಲ್ಲಿದ್ದಾಗ ಈ ರೀತಿಯ ಮಾನಸಿಕತೆಯಿಂದ ಹೊರಬರಬೇಕು. ಅದರರ್ಥ ಸಮುದಾಯಕ್ಕೆ, ಸಮಾಜಕ್ಕೆ ಶರಣಾಗುವುದಲ್ಲ, ಬದಲಾಗಿ ನಾಲ್ಕು ಜನರ ಜೊತೆಗೆ ನನ್ನ ಸುಖವನ್ನು ಹಂಚಿಕೊಳ್ಳುವುದು. Do's and don't ಇದೆ. ಈ ಸುಖದ ಕಲ್ಪನೆಗಳ ಆಧಾರದ ಮೇಲೆ ಹುಟ್ಟಿರುವ ಈ ವೋಕ್, ಲಿಬರಲ್ ಮಾನಸಿಕತೆಗಳ ಹಿಂದೆ ಇರುವ ಸುಖದ ಪರಿಕಲ್ಪನೆ ಬೇರೆ, ಭಾರತೀಯ ದೃಷ್ಟಿಯ ಸುಖದ ಪರಿಕಲ್ಪನೆ ಬೇರೆಯೇ ಇದೆ. ಬಾಹ್ಯದ ಇಂದ್ರಿಯಗಳಲ್ಲಿ ಮಾತ್ರವಲ್ಲ, ಅದರಾಚೆಗೂ ಒಂದು ಸುಖವಿದೆ. ಇದು ಬದಲಾಗಲು ಭಾರತೀಯ ಚಿಂತನೆ ಪ್ರಸ್ತುತವಾದುದು, 'thinking more and more about others' ಎನ್ನುವುದೇ ಆಧ್ಯಾತ್ಮ ಎನ್ನುತ್ತಾರೆ.

ಇನ್ನು ಟೆಕ್ನಾಲಜಿಯ ಯುಗ ಅಂತ ಕರೆಯುತ್ತೇವೆ, ಇವತ್ತು ಹುಟ್ಟಿದ ಯಾವುದೇ ಟೆಕ್ನಾಲಜಿ, ನಾಳೆ ನಮ್ಮ ಬಾಗಿಲಿಗೆ ಬಂದೇ ಬರುತ್ತದೆ. ಇದು ಬೆಳೆಯೋದ್ರಿಂದ ಮನುಷ್ಯನಿಗೆ ಹಾನಿಕಾರಕವಾಗುತ್ತದೆ. ಖಾಸಗೀತನದ ಸೌಂದರ್ಯ ಹೊರಟುಹೋಗಿದೆ ಎನ್ನುವ ರೀತಿಯಲ್ಲಿ ನಮ್ಮ ಚರ್ಚೆಯಿದೆ. ಟೆಕ್ನಾಲಜಿ ಎನ್ನುವುದು ಅನಿವಾರ್ಯ. ಗುರೂಜಿಯವರ ಕಾಲದಲ್ಲಿ ಇಷ್ಟು ವೇಗ ಪಡೆಯದೆ ಇದ್ದರೂ ಆಗಿನ ವಿಜ್ಞಾನ ತಂತ್ರಜ್ಞಾನದ ಬೆಳವಣಿಗೆಗೆ ಅವರು ವ್ಯಕ್ತ ಪಡಿಸಿದ್ದ ಅಭಿಪ್ರಾಯ, ವಿಚಾರ ಈಗಲೂ ಪ್ರಸ್ತುತ. ಯಾವುದೇ ತಂತ್ರಜ್ಞಾನದ ಮೂಲ ದೃಷ್ಟಿ ಧರ್ಮದ ಆಧಾರದ ಮೇಲೆ ಇರುವಂತೆ ನೋಡಿಕೊಳ್ಳಬೇಕು. ಸಂತುಲನ ಇರುವಂತೆ ನೋಡಿಕೊಳ್ಳಬೇಕು. Information, technology, science ಯಾವುದೇ ಆದರೂ, ಎಲ್ಲವೂ ಧರ್ಮ ದೃಷ್ಟಿಯಿಂದಲೇ ಒಡಮೂಡಬೇಕು. ವಿಜ್ಞಾನ, ತಂತ್ರಜ್ಞಾನವನ್ನು ತಡೆಯಲು ಸಾಧ್ಯವಿಲ್ಲ. ಬದಲಾಗಿ ಅದರ regulation ಎನ್ನುವುದರ ವಿಚಾರ ಧರ್ಮದ ಆಧಾರದಲ್ಲಿರಬೇಕು. ಯಾವುದರ ಬೆಳವಣಿಗೆ ಧರ್ಮದ ನಿಟ್ಟಿನಲ್ಲಿರುವುದಿಲ್ಲವೋ, ಎಲ್ಲಿ ಈ ರೀತಿಯ cosmic balance ಇರುವುದಿಲ್ಲವೋ, ಸಂಸ್ಕೃತಿ ಇಲ್ಲದಿರುವುದಿಲ್ಲವೋ ಅದು ನಿಜಕ್ಕೂ ಹಾನಿಕಾರಕ.

ಇತ್ತೀಚೆಗೆ Better than us ಎನ್ನುವ ಸೀರೀಸ್ ಈ ಕುರಿತು ಹೊಸ ಬೆಳಕು ಚೆಲ್ಲಬಹುದು. ಇತ್ತೀಚೆಗೆ Go ಎನ್ನುವ ಚೆಸ್ ರೀತಿಯ ಬೋರ್ಡ್ ಆಟ. ಅತ್ಯಂತ ಕಷ್ಟಕರವಾದ ಆಟ. ಅದರ ವರ್ಲ್ಡ್ ಚಾಂಪಿಯನ್ ಶಿಪ್ ನಡೆಯುತ್ತಿತ್ತು. ಅದರ ವರ್ಲ್ಡ್ ಚಾಂಪಿಯನ್ ಆಗಿದ್ದ ಒಬ್ಬನನ್ನ ಆರ್ಟಿಫೀಷಿಯಲ್ ಇಂಟಲಿಜೆನ್ಸ್ 4:1 ರಲ್ಲಿ ಗೆದ್ದಿತು. ಗೋ ಆಲ್ಫಾ ಎನ್ನುವ ವಿಶೇಷ ತಂತ್ರಜ್ಞಾನವನ್ನೇ ಅದಕ್ಕಾಗಿ ನಿರ್ಮಾಣ ಮಾಡಲಾಗಿತ್ತು. ಈ ಕುರಿತು ಮಾನಸಿಕ ತಜ್ಞರೊಬ್ಬರು ಅದರ ಕುರಿತು ಒಂದು ವಿಶೇಷವಾದ ವಿಶ್ಲೇಷಣೆ ಮಾಡಿ, ಆರ್ಟಿಫಿಷಿಯಲ್ ಇಂಟಲಿಜೆನ್ಸ್ ಸಹ ಒಂದಷ್ಟು ಸೆಟ್ ಆಫ್ ಪ್ರಾಕ್ಟೀಸ್, ತನ್ನದೇ ಆದ ಆಟದ ರೀತಿಯನ್ನು ರೂಪಿಸಿಕೊಂಡಿತ್ತು. ಇದು ಅದರ ಕಲ್ಚರ್ ಆಗಿತ್ತು ಎನ್ನುತ್ತಾರೆ. ಇಲ್ಲಿ ವಿಶೇಷ ಎನಿಸಿದ್ದು ಕಲ್ಚರ್ ಎನ್ನುವ ಶಬ್ದ ಬಳಸುತ್ತಾರೆ. ಅದರ ಕಲ್ಚರ್‌ನ ಆಧಾರದಲ್ಲಿ ಅದು ಗೆದ್ದಿತು. ತಂತ್ರಜ್ಞಾನ ಎನ್ನುವುದು ಅನಿವಾರ್ಯ, ಪರಿಣಾಮಕಾರಿ ಅದರ ಸೂಕ್ತ ಉಪಯೋಗ ನಮ್ಮದು.

ಠೇಂಗಡಿಯವರು ಗುರೂಜಿಯವರ ವಿಚಾರಗಳನ್ನು ಉಲ್ಲೇಖ ಮಾಡುತ್ತಾ "ಧರ್ಮಪ್ರೋಣ ವ್ಯಕ್ತಿಗಳು – ಧರ್ಮಾಧಿಷ್ಠ ಸಮಾಜ ಈ ದೃಷ್ಟಿ ಶಾಶ್ವತ – ನಾಳೆ ಇನ್ನೂ ಬದಲಾವಣೆಯಾಗಬಹುದು. ಆದರೆ ಮೂಲ ಇದೇ ಆಗಬೇಕು"ಎನ್ನುತ್ತಾರೆ.

ಶಿಕ್ಷಣ ಎಂದರೇನು? ಗುರೂಜಿಯವರು ಶಿಕ್ಷಣ, ವಿದ್ಯಾರ್ಥಿಗಳಿಗೆ ಕಲಿಸುವ ಗುರುಗಳು, ವ್ಯವಸ್ಥೆಯ ಕುರಿತು ಅನೇಕ ದೃಷ್ಟಿಕೋನ ನೀಡಿದ್ದಾರೆ. ಶಿಕ್ಷಣದ ಭವಿಷ್ಯದ ಕುರಿತು ಯೋಚಿಸಿದಾಗ – ಎಂ ಹಿರಿಯಣ್ಣನವರು ಹೇಳುವ ಹಾಗೆ – "education is not just informing minds but forming minds", ಮನಸನ್ನು ರೂಪಿಸುವ ಶಿಕ್ಷಣದ ಅಗತ್ಯವಿದೆ. ಕೊನೆಗೆ ಎಂತವರನ್ನು ತಯಾರು ಮಾಡುತ್ತೀರಾ? ಎಂದು ಯೋಚಿಸುತ್ತೇವೆ. ಶಾಲೆಯಲ್ಲಿ ಇರುವ 9–5 ಶಿಕ್ಷಣ ಅಲ್ಲ, ಕುಟುಂಬ ಸಮಾಜ ಶಿಕ್ಷಣದ ಜವಾಬ್ದಾರಿ ಹೊರಬೇಕು. ಒಂದೊಮ್ಮೆ "I have never allowed my schooling to interfere my education" ಎನ್ನುತ್ತಾನೆ Mark twain. ಗುರೂಜಿಯವರು ಮಾತನಾಡುತ್ತಾ Intelligence is different from education. ಬುದ್ಧಿ ಮನಸುಗಳ ಸರಿಯಾದ ಶಿಕ್ಷಣವಾಗಬೇಕು ಎನ್ನುತ್ತಾರೆ. ಧರ್ಮದ 10 ಲಕ್ಷಣಗಳನ್ನು ಉದಾಹರಿಸಿ ಹೇಳುತ್ತಾರೆ.

ಒಮ್ಮೆ ಹೀಗೆ ಯಾವುದೋ ಶಾಲೆಗೆ ಹೋದ ಸಂದರ್ಭದಲ್ಲಿ ಪಾಶ್ಚಾತ್ಯ ಶಿಕ್ಷಣದ ಚಾರ್ಟುಗಳು ಅದರ ಹಜಾರದಲ್ಲಿತ್ತು. ಅದನ್ನು ನೋಡಿದ ಗುರೂಜಿಯವರಿಗೆ ಮಕ್ಕಳಿಗೆ ಏನನ್ನು ಕಲಿಸುತ್ತೇವೆ ಎಂದು ಕೇಳುತ್ತಾರೆ. ಸತ್ಯಕಾಮ ಜಾಬಾಲಿಯ ಘಟನೆಯನ್ನೂ ಉಲ್ಲೇಖಿಸುತ್ತಾರೆ. ಅಂತಹ ವಿದ್ಯಾರ್ಥಿಗಳನ್ನ ನಾವು ತಯಾರು ಮಾಡಲು ಹೊರಟಿದ್ದೇವೆಯೇ ಎಂದು ಕೇಳಿಕೊಳ್ಳಬೇಕು ಎನ್ನುತ್ತಾರೆ. Information,knowledge ಎಲ್ಲ ಇದೆ, ಆದರೆ ಗುಣಗಳನ್ನು ಪಡೆಯುವುದು, ಯಾವುದನ್ನ ನಂಬಿಕೊಂಡು ಅವನು ಜೀವನ ಮಾಡಬೇಕಿದೆಯೋ ಅದು ಮುಖ್ಯ ಎಂಬುದನ್ನು ಗುರೂಜಿ ವಿಷನ್ ಎಂಡ್ ಮಿಷನ್ ಪುಸ್ತಕದಲ್ಲಿ ಹೇಳುತ್ತಾರೆ.

ಇನ್ನು ಜಾಗತಿಕ ವ್ಯವಸ್ಥೆ– world order ಕುರಿತಾಗಿ ಗುರೂಜಿಯವರ ಕಾಲಖಂಡದಲ್ಲಿ ಅನೇಕ ಬದಲಾವಣೆಗಳು ನಡೆಯುತ್ತಿತ್ತು, ಚಿಂತನಗಂಗಾದ ಪ್ರಾರಂಭದ ಅಧ್ಯಾಯದಲ್ಲಿ ನಮ್ಮ ಜಾಗತಿಕ ಧ್ಯೇಯದ ಕುರಿತಾಗಿ ಅವರು ಮಾತನಾಡುತ್ತಾರೆ. ಇದೊಂದು ಸನಾತನ ದೃಷ್ಟಿ. Nationalism ಅನ್ನು ರಾಷ್ಟ್ರೀಯತೆ ಎಂದೂ ನೇರವಾಗಿ ಅನುವಾದ ಮಾಡುವ ಸರಿಯಾದ ಶಬ್ದಗಳಲ್ಲ. ಆತ್ಮವಿಸ್ಮೃತಿ – ಸ್ವಾರ್ಥ ಕೇಂದ್ರಿತ ವಿಚಾರಗಳಿಂದ ಹೊರಬಂದು ಯೋಚಿಸುವ ವ್ಯಕ್ತವಾಗಿರುವ ಒಟ್ಟು ಅಭಿಪ್ರಾಯವೇ ರಾಷ್ಟ್ರೀಯತೆ. ಸನಾತನ ಚಿಂತನೆಗಳು ಅತ್ಯಂತ ಉನ್ನತ ಮಟ್ಟದ್ದು, ಪಾಶ್ಚಾತ್ಯ ದೇಶಗಳಲ್ಲಿ ಅದೊಂದು ನಕಾರಾತ್ಮಕ ದೃಷ್ಟಿಕೋನ ಎನ್ನುವ ಅಭಿಪ್ರಾಯ ಮೂಡಿದೆ. Nationalism ಎನ್ನುವುದು ಸಂಕುಚಿತ ಮನೋಭಾವ ಮೂಡಿದೆ. ಪ್ರಾದೇಶಿಕ ಅಸ್ಮಿತೆ, ಅಥವಾ ಆಯಾ ಪ್ರದೇಶದ ಗುಣ ಧರ್ಮದ ಆಧಾರದಲ್ಲಿ ಬದುಕುತ್ತಿರುವ ಜನರ ಅಭಿಪ್ರಾಯಗಳಿಗೆ ಗೌರವ ನೀಡು ಬದುಕುವುದು ಭಾರತೀಯ ದೃಷ್ಟಿಯಿಂದ ರಾಷ್ಟ್ರೀಯತೆ.

ಗುರೂಜಿಯವರು ಹೇಳುತ್ತಿರುವ ರಾಷ್ಟ್ರೀಯತೆಯ ಚಿಂತನೆಗೆ ಪಾಶ್ಚಾತ್ಯ ಜಗತ್ತಿನಲ್ಲೂ ಮಾನ್ಯತೆ ದೊರೆಯುತ್ತಿದೆ. ಟ್ರಂಪ್ ಅವರು ಅಮೆರಿಕದ ಅಧ್ಯಕ್ಷರಾಗಿದ್ದು, ಬ್ರೆಕ್ಸಿಟ್, ಫ್ರಾನ್ಸ್, ಇಟಲಿಯಲ್ಲಾದ ಬದಲಾವಣೆಯಿರಬಹುದು ಇದೆಲ್ಲವೂ ಕೂಡ ವಿಭಿನ್ನ ಗುಣ ಧರ್ಮದ ಜನರಿದ್ದಾರೆ, ಅವರ ಬಗೆಗೂ ಯೋಚಿಸಬೇಕುವೆನ್ನುವುದು ಮುಖ್ಯ ಎನ್ನುವ ದೃಷ್ಟಿಕೋನಕ್ಕೆ ಇಂಬು ನೀಡಿರುವಂಥದ್ದು. Individualism, liberalism, ಇವೆರಡರ ಮಧ್ಯೆಯಿರುವ realist ಆಗಿರುವ ಮಧ್ಯದ 'ನನಗಿಂತ ದೊಡ್ಡದು, ಜಗತ್ತಿನ ದೊಡ್ಡ ಪರಿಪೇಕ್ಷದ ನಡುವೆ ಕಳೆದುಹೋಗದ' ಪ್ರಾಕ್ಟಿಕಲ್ ಆಗಿರುವ ರಾಷ್ಟ್ರೀಯತೆ ಎನ್ನುವುದು ನಮ್ಮ ದೃಷ್ಟಿಯ operational base. Ethnic nationalism, tech nationalism ಎನ್ನುವ ಕಲ್ಪನೆಗಳೆಲ್ಲ ಈ ಪಾಶ್ಚಾತ್ಯ ಮೂಲವೇ. ರಾಷ್ಟ್ರೀಯತೆ ಎನ್ನುವುದು ಜಗತ್ತಿನ ಒಳಿತಿಗಾಗಿಯೇ ಎನ್ನುವುದು ನಮ್ಮ ಆದ್ಯತೆ. ಅಮೆರಿಕದ ದೊಡ್ಡಣ್ಣನ ಮನಸ್ಥಿತಿಗಿಂತ ಭಿನ್ನವಾದದ್ದು. ಮೌಲ್ಯಗಳಿಗಾಗಿ ಒಟ್ಟಾಗುವುದು, ಒಂದು ಜಗತ್ತಿನ ಒಳಿತಿಗಾಗಿ ಒಟ್ಟಾಗುವುದು ನಮ್ಮ ಆಶಯ.

ಮಿಥಿಕ್ ಸೊಸೈಟಿಯ ಗೌರವ ಕಾರ್ಯದರ್ಶಿಗಳಾದ ವಿ. ನಾಗರಾಜ ಅವರು ಅಧ್ಯಕ್ಷೀಯ ನುಡಿಗಳನ್ನಾಡಿದರು. ಅಧ್ಯಕ್ಷರಾದ ಕೃ. ನರಹರಿ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಕ್ಷೇತ್ರೀಯ ಕಾರ್ಯವಾಹರಾದ ನಾ ತಿಪ್ಪೇಸ್ವಾಮಿ, ಸಚಿವರಾದ ಕೋಟಾ ಶ್ರೀನಿವಾಸ ಪೂಜಾರಿ, ಹಿರಿಯ ಸಾಹಿತಿಗಳಾದ ಎಸ್.ಆರ್. ರಾಮಸ್ವಾಮಿಯವರು ಮುಂತಾದ ಹಿರಿಯರು ಉಪಸ್ಥಿತರಿದ್ದರು.

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 10th DECEMBER 2022

REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2021-2023 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23

FORTNIGHTLY 15-12-2022



## ಭಾರತ ಸಿರಿಧಾನ್ಯಗಳ ಜಾಗತಿಕ ಕೇಂದ್ರವಾಗಲಿದೆ: ಗೋಯಲ್



ಭಾರತವು ಸಿರಿಧಾನ್ಯಗಳ ಜಾಗತಿಕ ಕೇಂದ್ರವಾಗಲು ಶ್ರಮಿಸಬೇಕಿದೆ ಎಂದು ಕೇಂದ್ರ ಸಚಿವ ಪಿಯೂಷ್ ಗೋಯಲ್ ಹೇಳಿದ್ದಾರೆ. ನವದೆಹಲಿಯಲ್ಲಿ ನಡೆದ 'ಮಿಲ್ಲೆಟ್–ಸ್ಮಾರ್ಟ್ ನ್ಯೂಟ್ರಿಟಿವ್ ಫುಡ್' ಕಾನ್ಕ್ಲೇವ್ ಅನ್ನು ಉದ್ದೇಶಿಸಿ ಮಾತನಾಡಿದ ಅವರು, ಈ ಸಮಾವೇಶ ಮತ್ತು ಸಿರಿಧಾನ್ಯದ ಮೊದಲ ಅಂತರರಾಷ್ಟ್ರೀಯ ಖರೀದಿದಾರ–ಮಾರಾಟಗಾರರ ಸಭೆಯು ದೇಶವನ್ನು 'ಅಂತಾರಾಷ್ಟ್ರೀಯ ಸಿರಿಧಾನ್ಯ ವರ್ಷ 2023' ಕ್ಕೆ ಸಿದ್ಧಗೊಳಿಸಲು ಸಹಾಯ ಮಾಡುತ್ತದೆ ಎಂದು ಹೇಳಿದರು. ಭಾರತದ ಕೋರಿಕೆಯ ಮೇರೆಗೆ 70ಕ್ಕೂ ಹೆಚ್ಚು ದೇಶಗಳ ಅನುಮೋದನೆಯಲ್ಲಿ ವಿಶ್ವಸಂಸ್ಥೆ 2023ನ್ನು ಅಂತರರಾಷ್ಟ್ರೀಯ ಸಿರಿಧಾನ್ಯ ವರ್ಷವೆಂದು ಘೋಷಿಸಿದೆ ಎಂದು ಗೋಯಲ್ ಹೇಳಿದರು.

ಕಳೆದ ವರ್ಷ, ಯುನೈಟೆಡ್ ನೇಷನ್ಸ್ ಜನರಲ್ ಅಸೆಂಬ್ಲಿ (UNGA) ಬಾಂಗ್ಲಾದೇಶ, ಕೀನ್ಯಾ, ನೇಪಾಳ, ನೈಜೀರಿಯಾ, ರಷ್ಯಾ ಮತ್ತು ಸೆನೆಗಲ್ ಜೊತೆಗೆ ಭಾರತವು ಮಂಡಿಸಿದ ನಿರ್ಣಯದಂತೆ 2023ನ್ನು 'ಅಂತಾರಾಷ್ಟ್ರೀಯ ಸಿರಿಧಾನ್ಯ ವರ್ಷ' ಎಂದು ಗುರುತಿಸಲಾಗುತ್ತಿದೆ.

G20 ಮತ್ತು ಶಾಂಘೈ ಸಹಕಾರ ಸಂಘಟನೆಯ (SCO) ಭಾರತದ ಅಧ್ಯಕ್ಷತೆಯನ್ನು ಉಲ್ಲೇಖಿಸಿದ ಗೋಯಲ್, ಈ ನಾಯಕತ್ವದ ನಿಲುವು ವಿಶ್ವ ವೇದಿಕೆಯಲ್ಲಿ ಭಾರತದ ಬೆಳವಣಿಗೆಯನ್ನು ಸ್ಪಷ್ಟವಾಗಿ ಪ್ರತಿಬಿಂಬಿಸುತ್ತದೆ ಎಂದು ಗೋಯಲ್ ಹೇಳಿದ್ದಾರೆ. ಭಾರತವು 2018ರಲ್ಲಿ ತನ್ನ ಸಿರಿಧಾನ್ಯ ವರ್ಷವನ್ನು ಆಚರಿಸಿದೆ ಎಂದು ಗೋಯಲ್ ಗಮನ ಸೆಳೆದರು ಮತ್ತು ಪ್ರಧಾನಿ ನರೇಂದ್ರ ಮೋದಿ ಅವರು ಸಿರಿಧಾನ್ಯವನ್ನು ನಿರಂತರವಾಗಿ ಆಹಾರವಾಗಿ ಪ್ರಚಾರ ಮಾಡಿದ್ದಾರೆ. ಇದು ಭಾರತ ಮತ್ತು ಪ್ರಪಂಚದ ದೂರದ ಭಾಗಗಳಿಗೆ ಪೌಷ್ಟಿಕಾಂಶವನ್ನು ಕೊಂಡೊಯ್ಯಲು ಸಹಾಯ ಮಾಡುತ್ತದೆ. ಯೋಗದಿಂದ ಮಿಲ್ಲೆಟ್‌ಗಳವರೆಗೆ ಭಾರತವು ನಡೆಸಿದ ಇಂತಹ ಹಲವಾರು ಉಪಕ್ರಮಗಳನ್ನು ಜಗತ್ತು ಒಪ್ಪಿಕೊಂಡಿದೆ, ಇದು ಪ್ರಧಾನಿಯವರ ಜಾಗತಿಕ ನಾಯಕತ್ವದ ಸ್ಪಷ್ಟ ಪ್ರತಿಬಿಂಬ ಮತ್ತು ಭಾರತದ ಕಥೆಯನ್ನು ಪ್ರಪಂಚದಾದ್ಯಂತ ಪ್ರಚಾರ ಮಾಡುವ ಅವರ ಪ್ರಯತ್ನದ ಯಶಸ್ವಿನ ಸ್ಪಷ್ಟ ಪ್ರತಿಬಿಂಬವಾಗಿದೆ ಎಂದು ಅವರು ಹೇಳಿದರು.

## ಚುನಾವಣೆಗೆ ಸ್ಪರ್ಧಿಸಲು ಪುರುಷರಿಲ್ಲವೇ?: ಸ್ತ್ರೀ ದ್ವೇಷಿ ಹೇಳಿಕೆ ನೀಡಿದ ಇಮಾಮ್



ಮುಸ್ಲಿಂ ಮಹಿಳೆಯರನ್ನು ಚುನಾವಣೆಗೆ ಸ್ಪರ್ಧಿಸಲು ಆಯ್ಕೆ ಮಾಡುವವರು ಇಸ್ಲಾಂ ವಿರೋಧಿಗಳು ಮತ್ತು ಅವರು ಧರ್ಮವನ್ನು ದುರ್ಬಲಗೊಳಿಸುತ್ತಿದ್ದಾರೆ ಎಂದು ಅಹಮದಾಬಾದ್‌ನ ಜಾಮಾ ಮಸೀದಿಯ ಮುಖ್ಯ ಧರ್ಮಗುರು ನೀಡಿದ ಹೇಳಿಕೆ ಅಚ್ಚರಿ ಮೂಡಿಸಿದೆ. ಗುಜರಾತ್ ಚುನಾವಣೆಯ ಎರಡನೇ ಹಂತದ ಮತದಾನಕ್ಕೆ ಒಂದು ದಿನ ಮೊದಲು ಆತ ಈ ಸ್ತ್ರೀದ್ವೇಷದ ಹೇಳಿಕೆಯನ್ನು ನೀಡಿದ್ದಾರೆ.

ಇಸ್ಲಾಂ ಧರ್ಮದಲ್ಲಿ ನಮಾಜ್‌ಗಿಂತ ಮುಖ್ಯವಾದುದು ಯಾವುದೂ ಇಲ್ಲ, ಇಲ್ಲಿ ಮಹಿಳೆಯರು ಯಾರಾದರೂ ಎಲ್ಲರ ಮುಂದೆ ನಮಾಜ್ ಓದುವುದನ್ನು ನೀವು ನೋಡಿದ್ದೀರಾ? ಮಹಿಳೆಯರಿಗೆ ಇಸ್ಲಾಂನಲ್ಲಿ ನಿರ್ದಿಷ್ಟ ಸ್ಥಾನವಿದೆ ಎಂಬ ಕಾರಣಕ್ಕಾಗಿ ಅವರು ನಮಾಜ್ ಓದಲು ಮಸೀದಿಗಳಿಗೆ ಬರುವುದನ್ನು ನಿಲ್ಲಿಸಲಾಗಿದೆ. ಅದಕ್ಕಾಗಿಯೇ, ಮುಸ್ಲಿಂ ಮಹಿಳೆಯರಿಗೆ ಚುನಾವಣಾ ಟಿಕೆಟ್ ನೀಡುವವರು ಇಸ್ಲಾಂ ವಿರುದ್ಧ ಬಂಡಾಯವೆದ್ದಿದ್ದಾರೆ" ಎಂದು ಶಾಹಿ ಇಮಾಮ್ ಹೇಳಿದ್ದಾರೆ.

"ಚುನಾವಣೆಗೆ ಸ್ಪರ್ಧಿಸಲು ಪುರುಷರು ಯಾರೂ ಇಲ್ಲವೇ? ಮಹಿಳೆಯರ ಸ್ಪರ್ಧೆ ನಮ್ಮ ಧರ್ಮವನ್ನು ದುರ್ಬಲಗೊಳಿಸುತ್ತದೆ. ಮಹಿಳೆಯರನ್ನು ಶಾಸಕರು ಮತ್ತು ಕೌನ್ಸಿಲರ್‌ಗಳನ್ನಾಗಿ ಮಾಡಿದರೆ ಅವರ ಹಿಜಾಬ್ ಅನ್ನು ರಕ್ಷಿಸಲು ಸಾಧ್ಯವಿಲ್ಲ" ಎಂದಿದ್ದಾರೆ. "ಚುನಾವಣೆಯಲ್ಲಿ ಹೋರಾಡಲು ಹಿಂದೂಗಳ ಮತ್ತು ಮುಸ್ಲಿಮರ ಮನೆ–ಮನೆಗೆ ಭೇಟಿ ಮಾಡಬೇಕು. ಆದ್ದರಿಂದ, ನಾನು ಮಹಿಳೆಯರ ಸ್ಪರ್ಧೆಯ ವಿರುದ್ಧ ತೀವ್ರವಾಗಿ ವಿರೋಧಿಸುತ್ತೇನೆ. ಪುರುಷರಿಗೆ ಮಾತ್ರ ಚುನಾವಣಾ ಟಿಕೆಟ್ ನೀಡಿ" ಎಂದಿದ್ದಾರೆ.

## ಭಾರತ–ಯುಎಸ್ 'ಯುದ್ಧ ಅಭ್ಯಾಸ್' ವಿರೋಧಿಸಿದ ಚೀನಾಗೆ ಅಮೆರಿಕಾ ತಿರುಗೇಟು

ಉತ್ತರಾಖಂಡದ ಎಲ್‌ಎಸಿ ಬಳಿ ಭಾರತ–ಅಮೆರಿಕಾ ಜಂಟಿ ಮಿಲಿಟರಿ ಸಮರಾಭ್ಯಾಸ 'ಯುದ್ಧ ಅಭ್ಯಾಸ್'ಗೆ ಚೀನಾ ವ್ಯಕ್ತಪಡಿಸುತ್ತಿರುವ ವಿರೋಧವನ್ನು ಅಮೆರಿಕಾ ಶುಕ್ರವಾರ ತಿರಸ್ಕರಿಸಿದೆ. 'ಇದು ನಿಮ್ಮ ವ್ಯವಹಾರವಲ್ಲ' ಎಂದು ಕಟು ಸಂದೇಶ ನೀಡಿದೆ.




"ಭಾರತದಲ್ಲಿ ಅಮೆರಿಕಾದ ರಾಯಭಾರಿ ಎಲಿಜಬೆತ್ ಜೋನ್ಸ್ ಪ್ರತಿಕ್ರಿಯೆ ನೀಡಿ, ಅಮೆರಿಕಾ ಪ್ರಾದೇಶಿಕ ಭದ್ರತಾ ಸವಾಲುಗಳನ್ನು ಎದುರಿಸಲು ಹೆಚ್ಚು ಸಮರ್ಥವಾಗುವ ನಿಟ್ಟಿನಲ್ಲಿನ ಭಾರತದ ಪ್ರಯತ್ನಗಳನ್ನು ಬೆಂಬಲಿಸುತ್ತದೆ ಮತ್ತು ಭಾರತದೊಂದಿಗಿನ ತನ್ನ ಸಂಬಂಧವನ್ನು ಪರಿಣಾಮಕಾರಿ ಸಂಬಂಧವಾಗಿ ನೋಡುತ್ತದೆ" ಎಂದು ಹೇಳಿದ್ದಾರೆ.

ಕಳೆದ ತಿಂಗಳು ಬಾಲಿಯಲ್ಲಿ ನಡೆದ ಜಿ20 ಶೃಂಗಸಭೆಯ ನೇಪಥ್ಯದಲ್ಲಿ ಯುಎಸ್ ಅಧ್ಯಕ್ಷ ಜೋ ಬೈಡೆನ್ ಮತ್ತು ಚೀನಾ ಅಧ್ಯಕ್ಷ ಕ್ಸಿ ಜಿನ್ಪಿಂಗ್ ನಡುವಿನ ಸಭೆಯ ಕುರಿತು ಮಾತನಾಡಿದ ಜೋನ್ಸ್, "ಇದು ಎರಡು ಕಡೆಯ ನಡುವಿನ ಹೊಂದಾಣಿಕೆಯನ್ನು ಸೂಚಿಸುವುದಿಲ್ಲ. ಅಲ್ಲದೇ ಇಂಡೋ–ಪೆಸಿಫಿಕ್‌ಗೆ ಯುಎಸ್ ಬದ್ಧವಾಗಿದೆ" ಎಂದು ಹೇಳಿದ್ದಾರೆ. ಭಾರತ–ಅಮೆರಿಕ ಸಂಬಂಧದ ಆಳವು ಸಾಮಾಜಿಕ ಸವಾಲುಗಳ ಕುರಿತು ಸ್ಪಷ್ಟವಾದ ಚರ್ಚೆಯನ್ನು ನಡೆಸಲು ಉಭಯ ದೇಶಗಳಿಗೆ ಅನುವು ಮಾಡಿಕೊಡುತ್ತದೆ ಎಂದು ಹೇಳಿದ್ದಾರೆ.

ಉತ್ತರಾಖಂಡದ ಔಲಿಯಲ್ಲಿ ಭಾರತ–ಯುಎಸ್ ಮಿಲಿಟರಿ ವ್ಯಾಯಾಮಕ್ಕೆ ಚೀನಾದ ಆಕ್ಷೇಪಣೆಯ ಕುರಿತು ಕೇಳಲಾದ ಪ್ರಶ್ನೆಗೆ ಉತ್ತರಿಸಿದ ಜೋನ್ಸ್ ಅವರು, "ಅದು ನಿಜವಾಗಿಯೂ ಚೀನಾಗೆ ಸಂಬಂಧಪಟ್ಟ ವ್ಯವಹಾರವಲ್ಲ" ಎಂದಿದ್ದಾರೆ. LAC ಯಿಂದ ಸುಮಾರು 100 ಕಿಮೀ ದೂರದಲ್ಲಿರುವ ಮಿಲಿಟರಿ ಸೌಲಭ್ಯದಲ್ಲಿ ನಡೆದ ಎರಡು ವಾರಗಳ ಮೆಗಾ ಮಿಲಿಟರಿ ವ್ಯಾಯಾಮ "ಯುದ್ಧ ಅಭ್ಯಾಸ್" ಮುಕ್ತಾಯವಾಗಿದೆ.

## ಅಂಡಮಾನ್ & ನಿಕೋಬಾರ್‌ನ ದ್ವೀಪಗಳಿಗೆ ಪರಮವೀರ ಚಕ್ರ ಪುರಸ್ಕೃತ ಯೋಧರ ಹೆಸರು

ಅಂಡಮಾನ್ ಮತ್ತು ನಿಕೋಬಾರ್ ಕೇಂದ್ರಾಡಳಿತ ಪ್ರದೇಶದಲ್ಲಿರುವ 21 ಜನವಸತಿ ಇಲ್ಲದ ದ್ವೀಪಗಳಿಗೆ ದೇಶದ ಅತ್ಯುನ್ನತ ಯುದ್ಧಕಾಲದ ಶೌರ್ಯ ಪ್ರಶಸ್ತಿಯಾದ ಪರಮವೀರ ಚಕ್ರವನ್ನು ಪಡೆದ ವೀರರ ಹೆಸರನ್ನು ಸರ್ಕಾರ ಹೆಸರಿಸಿದೆ. 21 ದ್ವೀಪಗಳಲ್ಲಿ, 16 ಉತ್ತರ ಮತ್ತು ಮಧ್ಯ ಅಂಡಮಾನ್ ಜಿಲ್ಲೆಯಲ್ಲಿವೆ, ಐದು ದ್ವೀಪಗಳು ದಕ್ಷಿಣ ಅಂಡಮಾನ್‌ನಲ್ಲಿವೆ. ಈ ಕುರಿತು ಮಾತನಾಡಿದ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ಸಂಸದ ಕುಲದೀಪ್ ರಾಯ್ ಶರ್ಮಾ, "ರಕ್ಷಣಾ ಮತ್ತು ಸ್ಥಳೀಯ ಆಡಳಿತದ ನೆರವಿನಲ್ಲಿ ವೀರಸೈನಿಕರ ಹೆಸರನ್ನು 21 ದ್ವೀಪಗಳಿಗೆ ಹೆಸರಿಸಿದ ಕೇಂದ್ರದ ಕ್ರಮ ಸ್ವಾಗತಾರ್ಹ" ಎಂದರು.



"ನಮ್ಮ ವೀರ ಸೈನಿಕರನ್ನು ಗೌರವಿಸಲು ಕೇಂದ್ರವು ಅಂಡಮಾನ್‌ನಿಂದ 21 ದ್ವೀಪಗಳನ್ನು ಆಯ್ಕೆ ಮಾಡಿದೆ ಎಂದು ನನಗೆ ಸಂತೋಷವಾಗಿದೆ. ಶಾಲಾ ಮಕ್ಕಳಿಗಾಗಿ ಒಂದು ಸಣ್ಣ ಕೈಪಿಡಿಯನ್ನು ಪ್ರಕಟಿಸಲು ನಾನು ಆಡಳಿತವನ್ನು ವಿನಂತಿಸಲು ಬಯಸುತ್ತೇನೆ, ಇದರಿಂದ ಅವರು ನಮ್ಮ ತಾಯ್ನಾಡಿಗಾಗಿ ನಡೆದ ಅತ್ಯುನ್ನತ ತ್ಯಾಗದ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಬಹುದು" ಎಂದಿದ್ದಾರೆ. "ಸ್ವಾತಂತ್ರ್ಯ ಹೋರಾಟಗಾರರು ಮಾಡಿದ ತ್ಯಾಗದಿಂದಾಗಿ ಅಂಡಮಾನ್ ಮತ್ತು ನಿಕೋಬಾರ್ ದ್ವೀಪವು 'ತೀರ್ಥಸ್ಥಳ' ಆಗಿದೆ ಮತ್ತು ಈಗ ಪರಮವೀರ ಚಕ್ರ ಪುರಸ್ಕೃತರಿಗೆ ಅಂತಹ ಗೌರವವು ನಮಗೆ ಹೆಮ್ಮೆಯ ವಿಷಯವಾಗಿದೆ" ಎಂದು ಶರ್ಮಾ ಹೇಳಿದರು. ಉತ್ತರ ಮತ್ತು ಮಧ್ಯ ಅಂಡಮಾನ್‌ನಲ್ಲಿರುವ `INAN370' ಸಂಖ್ಯೆಯ ಮೊದಲ ಜನವಸತಿಯಿಲ್ಲದ ದ್ವೀಪಕ್ಕೆ ಮೇಜರ್ ಸೋಮನಾಥ್ ಶರ್ಮಾ ಅವರ ಹೆಸರನ್ನು ಇಡಲಾಗಿದೆ. ಇನ್ನು ಮುಂದೆ `INAN370' ಅನ್ನು 'ಸೋಮನಾಥ್ ದ್ವೀಪ' ಎಂದು ಕರೆಯಲಾಗುತ್ತದೆ.

## ಮಧ್ಯ ಏಷ್ಯಾ ದೇಶಗಳೊಂದಿಗೆ ಸಂಪರ್ಕ ಭಾರತದ ಪ್ರಮುಖ ಆದ್ಯತೆ: ದೋವಲ್



ಮಧ್ಯ ಏಷ್ಯಾದ ದೇಶಗಳೊಂದಿಗೆ ಸಂಪರ್ಕವು ಭಾರತದ ಪ್ರಮುಖ ಆದ್ಯತೆಯಾಗಿದೆ ಎಂದು ರಾಷ್ಟ್ರೀಯ ಭದ್ರತಾ ಸಲಹೆಗಾರ (ಎನ್ಎಸ್ಎ) ಅಜಿತ್ ದೋವಲ್ ಹೇಳಿದ್ದಾರೆ. ನವದೆಹಲಿಯಲ್ಲಿ ನಡೆದ ರಾಷ್ಟ್ರೀಯ ಭದ್ರತಾ ಸಲಹೆಗಾರರ ಮೊದಲ ಭಾರತ–ಮಧ್ಯ ಏಷ್ಯಾ ಸಭೆಯಲ್ಲಿ ಮಾತನಾಡಿದ ದೋವಲ್, ಶಾಂತಿಯುತ, ಸುರಕ್ಷಿತ ಮತ್ತು ಸಮೃದ್ಧ ಮಧ್ಯ ಏಷ್ಯಾ ನಮ್ಮ ಸಾಮಾನ್ಯ ಹಿತಾಸಕ್ತಿಯಲ್ಲಿದೆ ಎಂದಿದ್ದಾರೆ.

ಭಯೋತ್ಪಾದನೆಗೆ ಹಣಕಾಸು ನೆರವು ನೀಡುವುದನ್ನು ಎದುರಿಸುವುದು ಪ್ರತಿಯೊಬ್ಬರ ಸಮಾನ ಆದ್ಯತೆಯಾಗಿರಬೇಕು ಮತ್ತು ಭಯೋತ್ಪಾದಕ ಕೃತ್ಯಗಳಲ್ಲಿ ತೊಡಗಿರುವ ಘಟಕಗಳಿಗೆ ಬೆಂಬಲವನ್ನು ನೀಡುವುದನ್ನು ತಡೆಯಲು ಎಲ್ಲಾ ಯುಎನ್ ಸದಸ್ಯರು ಮುಂದಾಗಬೇಕು ಎಂದು ಒತ್ತಾಯಿಸಿದರು.

ಅವರು ಅಫ್ಘಾನಿಸ್ತಾನದ ಭದ್ರತಾ ಪರಿಸ್ಥಿತಿಯ ಬಗ್ಗೆ ಮಾತನಾಡಿದರು ಮತ್ತು ಇದು ನಮಗೆಲ್ಲರಿಗೂ ಸಂಬಂಧಿಸಿದ ಪ್ರಮುಖ ವಿಷಯವಾಗಿದೆ ಎಂದು ಹೇಳಿದರು. ಅಫ್ಘಾನಿಸ್ತಾನದಲ್ಲಿ ವಿಕಸನಗೊಳ್ಳುತ್ತಿರುವ ಭದ್ರತಾ ಪರಿಸ್ಥಿತಿ ಮತ್ತು ಆ ದೇಶದಿಂದ ಹೊರಹೊಮ್ಮುತ್ತಿರುವ ಭಯೋತ್ಪಾದನೆಯ ಬೆದರಿಕೆಯನ್ನು ಎದುರಿಸುವ ಮಾರ್ಗಗಳ ಮೇಲೆ ಕೇಂದ್ರೀಕರಿಸುವ ಕಜಕಿಸ್ತಾನ್, ಕಿರ್ಗಿಸ್ತಾನ್, ತಜಕಿಸ್ತಾನ್ ಮತ್ತು ಉಜ್ಬೇಕಿಸ್ತಾನ್ ಸೇರಿದಂತೆ ಮಧ್ಯ ಏಷ್ಯಾದ ಉನ್ನತ ಭದ್ರತಾ ಅಧಿಕಾರಿಗಳ ಸಮಾವೇಶವನ್ನು ಭಾರತವು ಇದೇ ಮೊದಲ ಬಾರಿಗೆ ಆಯೋಜಿಸುತ್ತಿದೆ.

ಪಾಕಿಸ್ತಾನಕ್ಕೆ ನೀಡಿದ ಸ್ಪಷ್ಟ ಸಂದೇಶದಲ್ಲಿ, ಸಂಬಂಧಿತ ಭಯೋತ್ಪಾದನಾ ನಿಗ್ರಹ ಒಪ್ಪಂದಗಳಲ್ಲಿ ಪ್ರತಿಪಾದಿಸಲಾದ ಜವಾಬ್ದಾರಿಗಳನ್ನು ಪೂರೈಸಲು ಭಾರತವು ಎಲ್ಲಾ ವಿಶ್ವಸಂಸ್ಥೆಯ ಸದಸ್ಯರಿಗೆ ಮನವಿ ಮಾಡಬೇಕು ಎಂದು ದೋವಲ್ ಹೇಳಿದ್ದಾರೆ.

ಓದುಗರೇ ಗಮನಿಸಿ
ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.